# ರಾಷ್ಟ್ರೀಯ ಆಯುರ್ವೇದ ದಿನಾಚರಣೆ 2018

# ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರದ ವರದಿ

## ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರದಿಂದ ಹಮ್ಮಿಕೊಂಡ ಕಾರ್ಯಕ್ರಮದ ಪಕ್ಷಿನೋಟ

| ಕ್ರಮ ಸಂಖ್ಯೆ | ದಿನಾಂಕ | ಸ್ಥಳ | ಚಟುವಟಿಕೆಯ ಹೆಸರು | ಫಲಾನುಭವಿಗಳ ಸಂಖ್ಯೆ | ಭಾಗವಹಿಸಿದ ಗಣ್ಯರು |
|---|---|---|---|---|---|
| 01 | 03/11/2018 | ಗೋಪಾಲ ಸ್ವಾಮಿ ಶಿಶು ವಿಹಾರ<br>ನಂಜು ಮಳಿಗೆ ವೃತ್ತ | ಆಯುರ್ವೇದ ಜಾಗೃತಿ ಕಾರ್ಯಾಕ್ರಮ | 400 | ಡಾ॥ಗುರುಬಸವರಾಜು<br>ಡಾ॥ರಾಧಾಕೃಷ್ಣರಾವ್<br>ಡಾ॥ ಚಂದ್ರಶೇಖರ್<br>ಡಾ॥ಎಲ್.ಎನ್.ಶೆಣೈ<br>ಡಾ॥ಮಂಜುನಾಥ್ |
| 02 | 04/11/2018 | ಗೋಪಾಲ ಸ್ವಾಮಿ ಪ್ರೌಢಶಾಲೆ<br>ನಂಜು ಮಳಿಗೆ ವೃತ್ತ | ಆಯುರ್ ಕ್ವಿಜ್ | 300 ಜನ ವಿದ್ಯಾರ್ಥಿಗಳು | ಡಾ॥ಗುರುಬಸವರಾಜು<br>ಡಾ॥ರಾಧಾಕೃಷರಾವ್ಣ<br>ಡಾ॥ ಚಂದ್ರಶೇಖರ್<br>ಡಾ॥ಮಂಜುನಾಥ್ |
| 03 | 05/11/2018 | ಗೋಪಾಲ ಸ್ವಾಮಿ ವಿದ್ಯಾ ಸಂಸ್ಥೆ | ಆಯುರ್ ಜಾಥಾ ಮತ್ತು ಮಾನವ ಸರಪಳಿ ನಿರ್ಮಾಣ | 450 | ಡಾ॥ಎಲ್.ಎನ್.ಶೆಣೈ<br>ಡಾ॥ಮಂಜುಪ್ರಸಾದ್<br>ಡಾ॥ಅಮೃತ ಶಿವಾಜಿ |
| 04 | 05/11/2018 | ಮೈಸೂರು ಆಯುರ್ವೇದ ವೃತ್ತ | ಆಯುರ್ ದೀಪೋತ್ಸವ | 200 | ಹೆಚ್ ಶ್ರೀನಿವಾಸ್<br>ಡಾ॥ಗಜಾನನ ಹೆಗ್ಡೆ<br>ಡಾ॥ಕೆರೋಲಿನ್<br>ಡಾ॥ಜಿ.ಆರ್.ಚಂದ್ರಶೇಖರ್ |
| 05 | 09/11/2018 | ಶಾರದ ವಿಲಾಸ್ ಫಾರ್ಮಸಿ ಕಾಲೇಜು | ಆಯುರ್ವೇದ ಜಾಗೃತಿ ಕಾರ್ಯಾಕ್ರಮ ಮತ್ತು ಫಾರ್ಮಸಿ ವಿದ್ಯಾರ್ಥಿಗಳಿಗೆ ವಿಶೇಷ ಉಪನ್ಯಾಸ | 200 | ಡಾ॥ಜೋಶಿ<br>ಡಾ॥ಗುರುಬಸವರಾಜು<br>ಡಾ॥ಪ್ರಕಾಶ್‌ಯೋಗಿ ಗುರುಜಿ |
| 06 | 09/11/2018 | ಪತ್ರಕರ್ತರಿಗೆ ಆರೋಗ್ಯ ಶಿಬಿರ | ಪತ್ರಕರ್ತರಿಗೆ ಆರೋಗ್ಯ ತಪಾಸಣೆ | 210 | ಶ್ರೀ ತ್ರಿನೇತ್ರ ಮಹಂತ ಸ್ವಾಮೀಜಿ<br>ಎಸ್.ಎ.ರಾಮದಾಸ್<br>ಸಿ.ಎಚ್.ವಿಜಯಶಂಕರ್<br>ಸಿ.ಕೆ.ಮಹೇಂದ್ರ<br>ಲೋಕೇಶ್‌ಬಾಬು<br>ಡಾ॥ಗುರುಬಸವರಾಜು |
| 07 | 12/11/2018 | ಎಸ್. ಹೊಸಕೋಟೆಯಲ್ಲಿ ಆರೋಗ್ಯ ತಪಾಸಣಾ ಶಿಬಿರ | ಆಯುರ್ವೇದ ಆರೋಗ್ಯ ತಪಾಸಣಾ ಶಿಬಿರ | 280 | ಡಾ॥ಸಿತಾದೇವಿ<br>ಡಾ॥ಮಂಜುಪ್ರಸಾದ್<br>ಡಾ॥ಶಶಿಕಿರಣ್<br>ಡಾ॥ವಿದ್ಯಾ ನಾರಾಯಣ್<br>ಡಾ॥ಅಂಜನಾ<br>ಡಾ॥ಎಲ್.ಎನ್.ಶೆಣೈ |

| | | | | | |
|---|---|---|---|---|---|
| 08 | 14/11/2018 | ಶ್ರೀ ಗುರು ಮಲ್ಲೇಶ್ವರ ಹಿರಿಯ ಪ್ರಾಥಮಿಕ ಶಾಲೆ,ಹೊಸಕೋಟೆ | ಜಾಗೃತಿ ಮತ್ತು ಆಯುರ್ ಕ್ವಿಜ್ | 100 | ಗುರುಸ್ವಾಮಿ<br>ಎಚ್.ಎಂ.ಶೋಭಾ, ಶಿಕ್ಷಕಿ<br>ಡಾ॥ಎಲ್.ಎನ್.ಶೆಣೈ<br>ಡಾ॥ಮಂಜುಪ್ರಸಾದ್<br>ಡಾ॥ಅಮೃತಶಿವಾಜಿ |
| 09 | 19/11/2018 | ಸರ್ಕಾರಿ ವೈದ್ಯಕೀಯ ಮಹಾವಿದ್ಯಾಲಯ | ಆಯುರ್ ಕ್ವಿಜ್ | 50 | ಡಾ॥ರಾಧಾಕೃಷ್ಣ<br>ಡಾ॥ಎಲ್.ಎನ್.ಶೆಣೈ |
| 10 | 24/11/2018 | ಹೊಸಕೋಟೆ | ಆಯುರ್ವೇದ ಜಾಗೃತಿ ಕಾರ್ಯಾಕ್ರಮ | 250 | ಡಾ॥ಎಲ್.ಎನ್.ಶೆಣೈ<br>ಡಾ॥ಮಂಜುಪ್ರಸಾದ್<br>ಡಾ॥ಅಮೃತಶಿವಾಜಿ |
| 11 | 27/11/2018 | ಶ್ರೀ ಗುರು ಮಲ್ಲೇಶ್ವರ ಹಿರಿಯ ಪ್ರಾಥಮಿಕ ಶಾಲೆ,ನಗರ್ಲೆ | ಆಯುರ್ ಕ್ವಿಜ್ | 150 | ಡಾ॥ಎಲ್.ಎನ್.ಶೆಣೈ<br>ಡಾ॥ಮಂಜುಪ್ರಸಾದ್<br>ಡಾ॥ಅಮೃತಶಿವಾಜಿ |
| 12 | 29/11/2018 | ರ್‍ಯಾಡಿಸನ್ ಬ್ಲೂ ಪ್ಯಾಸ CII | **Corporate Wellness Programme** | 300 | ಡಾ॥ಎಲ್.ಎನ್.ಶೆಣೈ<br>ಅರ್ಜುನ್ ರಂಗ<br>ಡಾ॥ಎನ್.ಮುತ್ತುಕುಮಾರ್<br>ಭಾಸ್ಕರ್ ಕಲಲೆ<br>ಡಾ॥ಶಾಂತಿವ್ರತಾನಂದಜಿ<br>ರಾಘವ ರಾವ್, CFTRI Director |
| 13 | 01/12/2018 | ಶ್ರೀ ಗುರು ಮಲ್ಲೇಶ್ವರ ಹಿರಿಯ ಪ್ರಾಥಮಿಕ ಶಾಲೆ,ಹೊಸಕೋಟೆ ಮತ್ತು ನಗರ್ಲೆ | ಆಯುರ್ ಕ್ವಿಜ್ (9:00–1:00) | 300 | ಡಾ॥ಎಲ್.ಎನ್.ಶೆಣೈ<br>ಡಾ॥ಮಂಜುಪ್ರಸಾದ್<br>ಡಾ॥ ಸುಪ್ರಿತ |
| 14 | 01/12/2018 | ತ್ರಿಧಿ ವೆಲ್ನೆಟ್ ಸೆಟ್,ಒಂಟಿಕೊಪ್ಪಲ್ | ಮಧುಮೇಹ ಜಾಗೃತಿ | 50 | ಡಾ॥ಎಲ್.ಎನ್.ಶೆಣೈ<br>ಡಾ॥ಮಂಜುಪ್ರಸಾದ್<br>ಡಾ॥ ಸುಪ್ರಿತ |
| 15 | 04/12/2018 | ಸರ್ಕಾರಿ ಪ್ರೌಢಶಾಲೆ,ಹೂಟಗಳ್ಳಿ,ಮೈಸೂರ ು | ಆಯುರ್ ಕ್ವಿಜ್ | 250 | ಡಾ॥ಎಲ್.ಎನ್.ಶೆಣೈ<br>ಡಾ॥ಮಂಜುಪ್ರಸಾದ್<br>ಸಂಗೀತ,<br>ಮುಖ್ಯೋಪಾಧ್ಯಾಯರು |
| 16 | 06/12/2018 | ಶ್ರೀ ಸತ್ಯಸಾಯಿ ಬಾಬ ಹೈಸ್ಕೂಲ್ ಜೈಲಕ್ಷ್ಮಿಪುರಂ | ಆಯುರ್ವೇದ ಜಾಗೃತಿ ಮತ್ತು ಆಯುರ್ವೇದ ಗಿಡಮೂಲಿಕೆಗಳ ಪ್ರಾತ್ಯಕ್ಷತೆ | 300 | ಡಾ॥ಎಲ್.ಎನ್.ಶೆಣೈ<br>ಡಾ॥ಮಂಜುಪ್ರಸಾದ್<br>ತ್ರಿಮೂರ್ತಿರವರು,<br>ಪ್ರಾಚಾರ್ಯರು |
| 17 | 13/12/2018 | ಎಸ್.ಡಿ.ಎಂ ಆಯುರ್ವೇದ ಕಾಲೇಜು,ಹಾಸನ | ಆಹಾರ ಮೇಳ | 1000 | ಶ್ರೀಮತಿ.ಮೀನಾಕ್ಷಿ ನೇಗಿ<br>ಡಾ॥ಎಲ್.ಎನ್.ಶೆಣೈ |
| | 23/12/2018 | ಅರ್ಕಧಾಮ | ಗ್ರಾಮೀಣ ಪ್ರದೇಶದಲ್ಲಿ ಉಚಿತ | 190 | |

| | | | | | |
|---|---|---|---|---|---|
| **18** | | | **ಆಯುರ್ವೇದ ತಪಾರಣಾ ಮತ್ತು ಹೃದ್ರೋಗ ಜಾಗೃತಿ ಶಿಬಿರ** | | **ಡಾ॥ಎಲ್.ಎನ್.ಶೆಣೈ<br>ಡಾ॥ದೀಪಾ<br>ಡಾ॥ಅಂಜನಾ<br>ಡಾ॥ಪಲ್ಲವಿ<br>ಡಾ॥ ಸಂಗೀತಾ<br>ಡಾ॥ರಿಷ್ಣಿ<br>ಡಾ॥ಸುಪ್ರೀತಾ<br>ಡಾ॥ಮಂಜುಪ್ರಸಾದ್** |

## 1.ಆಯುರ್ವೇದ ಜಾಗೃತಿ ಕಾರ್ಯಾಕ್ರಮ

ದಿನಾಂಕ 03-11-2018ರಂದು ಮೈಸೂರು ನಗರದ ಗೋಪಾಲ ಸ್ವಾಮಿ ಶಿಶು ವಿಹಾರ ವಿದ್ಯಾ ಸಂಸ್ಥೆಯಲ್ಲಿ ಆಯುರ್ವೇದ ಜಾಗೃತಿ ಮತ್ತು ಗಿಡಮೂಲಿಕೆಗಳ ಪ್ರದರ್ಶನವನ್ನು ಸಂಸ್ಥೆಯವರು ಆಯೋಜಿಸಿ ರಾಜ್ಯಮಟ್ಟದ ವಿಜ್ಞಾನ ಮೇಲದಲ್ಲಿ ಆಯುರ್ವೇದ ಸಂಶೋಧನಾ ಕೇಂದ್ರ ಮೈಸೂರುರವರು ಆಯೋಜಿಸಿದ್ದರು.

ನಗರದ ಪ್ರತಿಷ್ಠಿತ ಸುಮಾರು 50 ಶಾಲೆಗಳ ವಿದ್ಯಾರ್ಥಿಗಳು ವಿಜ್ಞಾನಮೇಳದಲ್ಲಿ ಪಾಲ್ಗೊಂಡಿದ್ದು ಅವರಿಗೆ ಆಯುರ್ವೇದ ಸಂಶೋಧನಾ ಕೇಂದ್ರ ಮೈಸೂರು ವತಿಯಿಂದ ಗಿಡಮೂಲಿಕೆಗಳ ಬಗ್ಗೆ ಅರಿವು ಮತ್ತು ಆಯುರ್ವೇದದ ಜಾಗೃತಿ ಕಾರ್ಯಾಕ್ರಮವನ್ನು ರಾಷ್ಟ್ರೀಯ ಆಯುರ್ವೇದ ದಿನಾಚರಣೆಯ ಪ್ರಯುಕ್ತ ಏರ್ಪಡಿಸಲಾಯಿತ್ತು.





ಸಮಾರಂಭದಲ್ಲಿ ಆಯುರ್ವೇದ ಬಗ್ಗೆ ದಿನಾಚರ್ಯೆ, ಋತುಚರ್ಯೆ,ಮನೆಮದ್ದು,ಗಿಡಮೂಲಿಕೆಗಳ ಪರಿಚಯವನ್ನು ನಗರದ ಖ್ಯಾತ ಆಯುರ್ವೇದ ವೈದ್ಯರಾದ ಡಾ॥ಚಂದ್ರಶೇಖರ್, ಆಯುರ್ವೇದ ಸಂಶೋಧನಾ ಕೇಂದ್ರದ ಸಹಾಯಕ ನಿರ್ದೇಶಕರಾದ ಡಾ॥ಎಲ್.ಎನ್.ಶೆಣೈ, ಡಾ॥ಮಂಜುಪ್ರಸಾದ್ ಹಾಗೂ ಡಾ॥ಅಮೃತಶಿವಾಜಿರವರು ಆಯುರ್ವೇದದ ಬಗ್ಗೆ ಸುಮಾರು 500 ವಿದ್ಯಾರ್ಥಿಗಳಿಗೆ ಸಂಕ್ಷಿಪ್ತ ಪರಿಚಯವನ್ನು ನೀಡಿದರು.ಸಂಸ್ಥೆಯ ಅಧ್ಯಕ್ಷರಾದ ಡಾ॥ಮಂಜುನಾಥ್, ಪ್ರಾಚಾರ್ಯರು, ಸಿಬ್ಬಂಧಿ ವರ್ಗದವರು ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

# 2.ಆಯುರ್ ಕ್ವಿಜ್ ಕಾರ್ಯಾಕ್ರಮ

ದಿನಾಂಕ 04–11–2018ರಂದು ಸರ್ಕಾರಿ ಆಯುಷ್ ಸಂಶೋಧನಾ ಕೇಂದ್ರ ಇವರ ವತಿಯಿಂದ ನಗರದ ನಂಜುಮಳಿಗೆ ವೃತ್ತದಲ್ಲಿರುವ ಗೋಪಾಲಸ್ವಾಮಿ ಪ್ರೌಢಶಾಲೆಯಲ್ಲಿ ನಡೆಸಲಾಯಿತು. ಈ ಕ್ವಿಜ್ ಕಾರ್ಯಾಕ್ರಮದಲ್ಲಿ ಪ್ರಥಮ ಹಂತದಲ್ಲಿ ಸುಮಾರು 150ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಪ್ರಥಮ ಹಂತದ ಕ್ವಿಜ್ ಕಾರ್ಯಾಕ್ರಮವು ಬರವಣಿಗೆಯದಾಗಿದ್ದು 2ನೇಯ ಹಂತವು ಸ್ಟೇಜ್ ಶೋ ರೂಪದಲ್ಲಿ ಏರ್ಪಡಿಸಿತ್ತು.

ಒಂದನೇ ಹಂತದ ಕ್ವಿಜ್ನಲ್ಲಿ ಅತ್ಯಂತ ಹೆಚ್ಚು ಅಂಕಗಳಿಸಿದ 10 ವಿದ್ಯಾರ್ಥಿಗಳನ್ನು 2ನೇಯ ಹಂತದ ಸ್ಟೇಜ್ ಶೋ ಕ್ವಿಜ್‌ಗೆ ಭಾಗವಹಿಸಲು ಸೂಚಿಸಲಾಯಿತು.ಕ್ವಿಜ್ ಕಾರ್ಯಾಕ್ರಮವನ್ನು ಡಾ॥ಮಂಜುಪ್ರಸಾದ್ ಡಾ॥ಅಮೃತ ಹಾಗೂ ಡಾ॥ಪನ್ನಗರವರು ಅತ್ಯಂತ ಯಶಸ್ವಿಯಾಗಿ ನಿರ್ವಹಿಸಿದರು.

ಈ ಕ್ವಿಜ್ನಲ್ಲಿ ಪ್ರಥಮ ಬಹುಮಾನವನ್ನು ಸಂಕೇತ್ ಮತ್ತು ಲಿಖಿತಾ, ಎರಡನೇ ಬಹುಮಾನವನ್ನು ವರ್ಷಿಣಿ ಮತ್ತು ನಿತಿನ್,ಮೂರನೇ ಬಹುಮಾನವನ್ನು ಭುವನ್ ಮತ್ತು ಐಶ್ವರ್ಯ, ನಾಲ್ಕನೇ ಬಹುಮಾನವನ್ನು ಜಯಂತ್‌ಕುಮಾರ್ ಮತ್ತು ಸಿಂಚನಾ ಮತ್ತು ಐದನೇ ಬಹುಮಾನವನ್ನು ಸಿದ್ಧರಾಮ ಮತ್ತು ನೋಬಲ್ ರೋಹನ್ 5ನೇ ಸ್ಥಾನಗಳಿಸಿದರು.



ಬಹುಮಾನ ವಿತರಿಸಲು ಮೇಲ್ಕಂಡ ಜೆ.ಎಸ್.ಎಸ್ ಆಯುರ್ವೇದ ಕಾಲೇಜಿನ ಹಿರಿಯ ವೈದ್ಯಾರಾದ ಡಾ॥ಗುರುಬಸವರಾಜ್ ರವರು ವಿಜೇತರಿಗೆ ಬಹುಮಾನ ವಿತರಣೆ ಮಾಡಿದರು. ಸಮಾರಂಭದಲ್ಲಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ॥ಚಂದ್ರಶೇಖರ್ ಕರೆಸ್ಪಂಡೆಂಟ್ ಶ್ರೀ ಮಂಜುನಾಥ್, ಸಂಶೋಧನಾ ಕೇಂದ್ರದ ಸಹಾಯಕ ನಿರ್ದೇಶಕರಾದ ಡಾ॥ಲಕ್ಷ್ಮೀನಾರಾಯಣ ಶೆಣೈ ಸಂಸ್ಥೆಯ ಪ್ರಾಂಶುಪಾಲರು, ಸಿಬ್ಬಂಧಿ ವರ್ಗ ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

# 3.ಆಯುರ್ ನಡಿಗೆ ಮತ್ತು ಮಾನವ ಸರಪಳಿ

ದಿನಾಂಕ ನವೆಂಬರ್ 05 2018ರಂದು ರಾಷ್ಟ್ರಿಯ ಆಯುರ್ವೇದ ದಿನಾಚರಣೆಯ ಅಂಗವಾಗಿ ಮೈಸೂರು ಆಯುರ್ವೇದ ಸಂಶೋಧನಾ ಕೇಂದ್ರ ಹಾಗೂ ಗೋಪಾಲಸ್ವಾಮಿ ಶಿಕ್ಷಣ ಸಂಸ್ಥೆ ಇವರ ಸಯುಕ್ತಾಶ್ರಯದಲ್ಲಿ ಆಯುರ್ವೇದದ ಅರಿವು ನಡಿಗೆಯ ಮೂಲಕ ವಿದ್ಯಾರ್ಥಿಗಳು ಮಾನವ ಸರಪಳಿಯನ್ನು ನಂಜುಮಳಿಗೆಯ ವೃತ್ತದಲ್ಲಿ ಮಾಡುವುದರ ಮೂಲಕ ವಿಶಿಷ್ಟ ರೀತಿಯಲ್ಲಿ ಆಯುರ್ವೇದ ದಿನಾಚರಣೆಯನ್ನು ಆಚರಿಸಿ ಜನರ ಮನಸ್ಸೆಳೆದರು. ಕಾರ್ಯಾಕ್ರಮದ ಉದ್ಘಾಟನೆಯನ್ನು ಗೋಪಾಲಸ್ವಾಮಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಎ.ಎಸ್. ಚಂದ್ರಶೇಕರ್ ನೇರವೇರಿಸಿದ್ದರು. ಈ ನಡಿಗೆಯಲ್ಲಿ ಸುಮಾರು 500ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿ ಆಯುರ್ವೇದ ಚಿಕಿತ್ಸ ಪದ್ದತಿಯ ಅರಿವು, ಗಿಡಮೂಲಿಕೆಯ ಪರಿಚಯ ಹಾಗೂ ಪ್ರಾಚೀನ ಆಯುರ್ವೇದ ಪದ್ಧತಿಯ ಹಿರಿಮೆ ಗರಿಮೆಗಳ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿಯನ್ನು ಮೂಡಿಸಿದರು.

ಕಾರ್ಯಾಕ್ರಮದಲ್ಲಿ ಗೋಪಾಲಸ್ವಾಮಿ ವಿದ್ಯಾಸಂಸ್ಥೆಯ ಕರೆಸ್ಪಾಂಡೆಂಟ್ ಮಂಜುನಾಥ್, ಸಮಾಜ ಸೇವಕರಾದ ಅರುಣಾಚಲಂ, ಆಯುರ್ವೇದ ಸಂಶೋಧನಾ ಕೇಂದ್ರದ ಸಹಾಯಕ ನಿರ್ದೇಶಕರಾದ ಎಲ್.ಎನ್.ಶೆಣೈ, ವೈದಯರಾದ ಡಾ॥ಮಂಜುಪ್ರಸಾದ್.ಎಂ.ಕೆ, ಡಾ॥ಅಮೃತ ಶಿವಾಜಿ, ಡಾ॥ಸುಕನ್ಯ, ಸಂಸ್ಥೆಯ ಪ್ರಾಚಾರ್ಯರು , ಅಧ್ಯಾಪಕ ವೃಂದ ಹಾಗೂ ಎನ್,ಸಿ.ಸಿಯ ವಿದ್ಯಾರ್ಥಿಗಳು ಭಾಗವಹಿಸಿದರು.






Shishuvihara (R) & Maharaja Education Trust (R)
GOPALASWAMY HIGH SCHOOL
(ENGLISH MEDIUM)

# 4.ಆಯುರ್ವೇದ ಜಾಗೃತಿ ಕಾರ್ಯಾಕ್ರಮ ಮತ್ತು ಫಾರ್ಮಸಿ ವಿದ್ಯಾರ್ಥಿಗಳಿಗೆ ವಿಶೇಷ ಉಪನ್ಯಾಸ

ದಿನಾಂಕ ನವೆಂಬರ್ 09 2018ರಂದು ರಾಷ್ಟ್ರಿಯ ಆಯುರ್ವೇದ ದಿನಾಚರಣೆಯ ಅಂಗವಾಗಿ ಮೈಸೂರು ಆಯುರ್ವೇದ ಸಂಶೋಧನಾ ಕೇಂದ್ರ ಹಾಗೂ ಶಾರದ ವಿಲಾಸ್ ಫಾರ್ಮಸಿ ಕಾಲೇಜು ಇವರ ಸಂಯುಕ್ತಾಶರಯದಲ್ಲಿ ಫಾರ್ಮಸಿ ವಿದ್ಯಾರ್ಥಿಗಳಿಗೆ ಡಾ॥ಪ್ರಕಾಶ್‌ಯೋಗಿ ಗುರುಜಿ ಅವರು ಆಯುರ್ವೇದ ಮತ್ತು ಯೋಗದ ಬಗ್ಗೆ ವಿಶೇಷ ಉಪನ್ಯಾಸ ನೀಡಿದರು.ಕಾರ್ಯಾಕ್ರಮದ ಉದ್ಘಾಟನೆಯನ್ನು ಡಾ॥ಗುರುಬಸವರಾಜ್ ರವರು ಮಾಡಿ ವಿದ್ಯಾರ್ಥಿಗಳಿಗೆ ಆಯುರ್ವೇದ ಹಾಗೂ ಫಾರ್ಮಸಿ ಮತ್ತು ಆಯುರ್ವೇದಕ್ಕೆ ಅಭಿನಾಭಾವ ಸಂಬಂಧವೊಂದಿದ್ದು ಆಯುರ್ವೇದ ತತ್ವಗಳನ್ನು ವೈಜ್ಞಾನಿಕ ತಳಾದಿಗಳಲ್ಲಿ ಫಾರ್ಮಸಿಯ ತತ್ವಗಳೊಂದಿಗೆ ವಿಶ್ಲೇಷಿಸಿದಾಗ ಆರೋಗ್ಯ ಸೇವೆಯು ಸಮಾಜದ ಕಟ್ಟಕಡೆಯ ವ್ಯಕ್ತಿಗು ಲಭಿಸಿದಂತಾಗುತ್ತದೆ ಎಂದು ಅಭಿಪ್ರಾಯ ಪಟ್ಟರು. ಮುಂದುವರೆದು ಈ ಎರಡು ವಿಜ್ಞಾನಗಳ ವಿದ್ಯಾರ್ಥಿಗಳ ಸಮ್ಮಿಲನ ಹೊಸ ಚಿಗುರು ಹಳೆ ಬೇರು ಕೂಡಿರಲು ಮನಸ್ಸೋಬಗು ಎಂಬ ನಾನುಡಿಯ್ನು ನೆನಪಿಸಿದಂತಾಗುತ್ತದೆ ಎಂದು ಮಾರ್ಮಿಕವಾಗಿ ನುಡಿದರು.

ಆನಂತರ ಡಾ॥ಪ್ರಕಾಶ್ ಯೋಗ ಗುರುಜಿ ವಿದ್ಯಾರ್ಥಿಗಳಿಗೆ ಮಾನಸಿಕ ಒತ್ತಡದ ನಿವಾರಣೆಯಲ್ಲಿ ಆಯುರ್ವೇದ ಮತ್ತು ಯೋಗದ ಪಾತ್ರದ ಬಗ್ಗೆ ವಿಶೇಷ ಉಪನ್ಯಾಸವನ್ನು ನೀಡಿ ಪ್ರಾಯೋಗಿಕವಾಗಿ ಯೋಗದ ಶೈಲಿಗಳನ್ನು ಪ್ರದರ್ಶಿಸುವ ಮೂಲಕ ವಿದ್ಯಾರ್ಥಿಗಳಲ್ಲಿ ಅಚ್ಚರಿ ಮೂಡಿಸಿದರು.





## 5.ಪತ್ರಕರ್ತರ ಸಂಘದಲ್ಲಿ ಆರೋಗ್ಯ ಶಿಬಿರ:

ರಾಷ್ಟ್ರೀಯ ಅಯುರ್ವೇದ ದಿನಾಚರಣೆಯ ಅಂಗವಾಗಿ ನವೆಂಬರ್ 9ರಂದು ಆಯುರ್ವೇದ ಸಂಶೋಧನಾ ಕೇಂದ್ರದ ವತಿಯಿಂದ ಪತ್ರಕರ್ತರಿಗೆ ಮತ್ತು ಪತ್ರಕರ್ತರ ಕುಟುಂಬ ವರ್ಗದವರಿಗೆ ವಿಶೇಷ ಆಯುರ್ವೇದ ಚಿಕಿತ್ಸೆ ಶಿಬಿರವನ್ನು ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮೀಜಿ ಚಂದ್ರವನದವರು ಗಿಡಮೂಲಿಕೆ ಸಸ್ಯಕ್ಕೆ ನೀರೆರೆಯುವುದರ ಮೂಲಕ ಉದ್ದಾಟಿಸಿದರು. ಪತ್ರಕರ್ತರಿಗೆ ಆಯುರ್ವೇದ ಶಿಬಿರ ಏರ್ಪಡಿಸುವುದನ್ನು ಶ್ಲಾಘಿಸಿದ ಶ್ರೀಗಳು ಇಂತಹ ಶಿಬಿರ ಮೂಲಕ ಪತ್ರಕರ್ತರ ಆಯುರ್ವೇದದ ಬಗ್ಗೆ ಜಲವನ್ನು ಹೊಂದುವಂತರಾಗಬೇಕು. ಈ ಮೂಲಕ ಭಾರತದ  ಸಂಸ್ಕೃತಿ,ಸಂಸ್ಕಾರ ಆಯುರ್ವೇದದ ಅನಾವರಣವನು ಜನತೆಗೆ ತಮ್ಮ ಲೇಖನಿಯ ಮೂಲಕ ಮಾಡಬೇಕೆಂದು ಕರೆಕೊಟ್ಟರು. ಆಯುರ್ವೇದದ ರಾಷ್ಟ್ರದ ಸಂಪತ್ತು ಸಾವಿರಾರು ವರ್ಷಗಳ ಜ್ಞಾನ ಭಂಡಾರ ರಾರ್ವಜನಿಕರು ಇದರ ಉಪಯೋಗವನ್ನು ಪಡೆಯಬೇಕೆಂದು ತಮ್ಮ ಉದ್ಘಾಟನಾ ಭಾಷಣದಲ್ಲಿ ಹೇಳುತ್ತಾ ಈ ರೀತಿಯ ಶಿಬಿರಗಳು ನಡೆದಾಗ ಮಾತ್ರ ಆಯುರ್ವೇದ ಪ್ರಚಾರ ನಡೆಯುತ್ತದೆ ಎಂದು ಶಿಬಿರದ ಆಯೋಜಕರನ್ನು ಶ್ಲಾಘಿಸಿದರು.

ಆಯುರ್ವೇದದ ಚಿಕಿತ್ಸೆ ಅತ್ಯಂತ ಪರಿಣಾಮಕಾರಿಯಾದದ್ದು ಮತ್ತು ಇದರ ಕುರಿತು ತಮ್ಮ ವೈಯಕ್ತಿಕ ಅನುಭವಗಳನ್ನು ಹಂಚಿಕೊಂಡರು.ಆಯುರ್ವೇದ ಜಾರಿಯಲ್ಲಿ ಯಾವುದೇ ಅಡ್ಡ ಪರಿಣಾಮಗಳು

ಇರದೇ ಇರುವುದು ಸಹ ಒಂದು ವರ ಎಂದು ತಿಳಿಸಿದ ಅವರು ಜನರು ಈ ಶಿಬಿರದ ಉಪಯೋಗವನ್ನು ಪಡೆಯಲು ಕರೆ ನೀಡಿದರು.

ಸಮಾರಂಭದಲ್ಲಿ ಮುಖ್ಯ ಅತಿಥಿಗಳಾದ ಮಾಜಿ ಅರಣ್ಯ ಸಚಿವ ಸಿ.ಎಚ್.ವಿಜಯಶಂಕರ್‌ರವರು, ಯೋಗಗುರು ಪ್ರಕಾಶ್ ಯೋಗಿರವರು ಭಾಗವಹಿಸಿದ್ದರು ಸಮಾರಂಭದ ಪ್ರಸ್ತಾವಿಕ ನುಡಿಗಳನ್ನು ಡಾ॥ಗುರುಬರಸರಾಜ್ ಹಿರಿಯವೈದ್ಯರು ಜೆ.ಎಸ್.ಎಸ್ ಆಯುರ್ವೇದ ಕಾಲೇಜು

ರವರು ಮತ್ತು ಸ್ವಾಗತವನ್ನು ಡಾ॥ಲಕ್ಷ್ಮೀನಾರಾಯಣ ಶೆಣೈ ಸಹಾಯಕ ನಿರ್ದೇಶಕರು ಆಯುರ್ವೇದ ಸಂಶೋಧನಾ ಕೇಂದ್ರ ಮೈಸೂರು ಇವರು ಮಾಡಿದರು.

ಸಮಾರಂಭದಲ್ಲಿ ಹಿರಿಯ ಪತ್ರಕರ್ತರಾದ ನಿರಂಜನ್ ನಿಕ್ಕಂ ರವರನ್ನು ಸನ್ಮಾನಿಸಲಾಯಿತು. ಸಮಾರಂಭದಲ್ಲಿ ಡಾ॥ಗಜಾನನ ಹೆಗ್ಡೆ, ಪ್ರಾಚಾರ್ಯರು ಆಯುರ್ವೇದ ಕಾಲೇಜು ಮೈಸೂರು, ಡಾ॥ ವಿ.ರಾಜೇಂದ್ರ

ಮೆಡಿಕಲ್ ಸೂಪರಿಟೆಂಡೆಂಟ್ ಹೈಟೆಕ್ ಪಂಚಕರ್ಮ ಆಸ್ಪತ್ರೆ ಮೈಸೂರು . ಡಾ॥ಅನಿಲ್ ಕುಮಾರ್, ಡಾ॥ಚಂದ್ರಶೇಖರ್ ಎ.ಎಸ್, ಡಾ॥ಶ್ರೀವತ್ಸ, ಡಾ॥ಬೀನಾ, ಡಾ॥ರಮೇಶ್ ಕುಮಾರ್ ರವರು ಶಿಬಿರದಲ್ಲಿ ವೈದ್ಯಾಧಿಕಾರಿಗಳಾಗಿ ಭಾಗವಹಿಸಿದರು. ಸರ್ಕಾರಿ ಆಯುರ್ವೇದ ಕಾಲೇಜು ಮೈಸೂರು, ಇಲ್ಲಿನ ಸ್ನಾನಕೋತ್ತರ ವಿದ್ಯಾರ್ಥಿಗಳು, ಡಾ॥ಜೋಶಿ ಪ್ರಚಾರ್ಯರು ಶಾರದವಿಲಾಸ್ ಫರ್ಮೇಸಿ ಕಾಲೇಜು ಮತ್ತು ಅಲ್ಲಿಯ ವಿದ್ಯಾರ್ಥಿಗಳು ಸಹ ಶಿಬಿರದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ನಾರಾಯಣ ಹೃದಯಾಲಯ ಮೈಸೂರು ಇವರ ವೈದ್ಯರ ತಂಡ ಉಚಿತವಾಗಿ **ECG, Echo, Blood test** ಗಳನ್ನು ಸಹ ಶಿಬಿರದಲ್ಲಿ ಆಯೋಜಿಸಿದರು.

ಶಿಬಿರದಲ್ಲಿ ಸುಮಾರು 200 ಜನ ಪತ್ರಕರ್ತರ ಹಾಗೂ ಪತ್ರಕರ್ತರ ಕುಟುಂಬದವರು ಉಚಿತ ಚಿಕಿತ್ಸೆಯನ್ನು ಪಟೆದರು.ಶಿಬಿರದಲ್ಲಿ ಸುಮಾರು 24 ಜನರಿಗೆ **Echo Cardiography, 68** ಜನರಿಗೆ **ECG, 80** ಜನರಿಗೆ **Bone density test, 115** ಜನರಿಗೆ **RBS** ರಕ್ತಪರೀಕ್ಷೆಯನ್ನು ಮಾಡಲಾಯಿತು. ಶಿಬಿರದಲ್ಲಿ ಪತ್ರಕರ್ತರ ಸಂಘದ ಅಧ್ಯಕ್ಷರಾದ ಮಹೇಂದ್ರರವರು ಕಾರ್ಯಾದರ್ಶಿಗಳಾದ ಲೋಕೇಶ್‌ಬಾಬು ರವರು ಸಕ್ರಿಯವಾಗಿ ಪಾಲ್ಗೊಂಡು ಆಯುರ್ವೇದ ಸಂಶೋಧನಾ ಕೇಂದ್ರ ಮೈಸೂರು ಇಲ್ಲಿಂದ ಆಯೋಜಿಸಲಾದ ಪತ್ರಕರ್ತರಿಗೆ ವಿಶೇಷ ಆರೋಗ್ಯ ಶಿಬಿರ ಯಶಸ್ವಿಗೆ ಕಾರಣೀಭೂತರಾದರು






## 6.ಆಯುರ್ವೇದ ಆರೋಗ್ಯ ತಪಾಸಣಾ ಶಿಬಿರ

ರಾಷ್ಟ್ರೀಯ ಅಯುರ್ವೇದ ದಿನಾಚರಣೆಯ ಅಂಗವಾಗಿ ನವೆಂಬರ್ 12ರಂದು ಆಯುರ್ವೇದ ಸಂಶೋಧನಾ ಕೇಂದ್ರದ ವತಿಯಿಂದ ನಂಜನಗೂಡು ತಾಲೂಕು ಎಸ್ ಹೊಸಕೋಟೆ ಗ್ರಾಮದ ಶ್ರೀ ಗುರುಮಲ್ಲೇಶ್ವರ ಮಠದ ಆವರಣದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ, ಮಧುಮೇಹ ಜಾಗೃತಿ ಶಿಬಿರವನ್ನು ಆಯೋಜಿಸಲಾಯಿತು.

ಶಿಬಿರದ ಉದ್ಘಾಟನೆಯನ್ನು ದೇವನಾಪುರ ಮಠದ ಜಡೆಸ್ವಾಮಿ ರವರು ನಿರ್ವಹಿಸಿ ಆಧುನಿಕ ಜೀವನ ಶೈಲಿಯಿಂದ ಜನರಿಗೆ ನಾನತರಹದ ಕಾಯಿಲೆಗಳು ಉಂಟಾಗುತ್ತಿದ್ದು ಆಯುರ್ವೇದ ಶಾಸ್ತ್ರದಲ್ಲಿ ಹೇಳಿದ ಜೀವನ ಶೈಲಿ ಮತ್ತು ಆಹಾರ ಪದ್ದತಿಯನ್ನು ಅಳವಡಿಸಿಕೊಂಡರೆ ಮನುಷ್ಯನ ಜೀವನವು ಸಂವೃದ್ಧಿ ಮತ್ತು ಆರೋಗ್ಯಕರವಾಗಿರುತ್ತದೆ ಆದ್ದರಿಂದ ಗ್ರಾಮೀಣ ಪ್ರದೇಶದಲ್ಲಿ ಆರೋಗ್ಯದ ಜಾಗೃತಿ ಮತ್ತು ಆರೋಗ್ಯ ಶಿಬಿರಗಳನ್ನು ನಡೆಸುವುದು ಸೂಕ್ತ ಮತ್ತು ಈ ಶಿಬಿರವನ್ನು ಆಯೋಜಿಸಿದ ಆಯುರ್ವೇದ ಸಂಶೋಧನಾ ಕೇಂದ್ರದ ಆಯೋಜಕರಿಗೆ ಮೆಚ್ಚುಗೆಯನ್ನು ಸೂಚಿಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಮಠದ ಗುರುಸ್ವಾಮಿಯವರು , ಕಾರ್ಯಾದರ್ಶಿ ಪ್ರಭುಸ್ವಾಮಿ,ಗ್ರಾಮದ ಮುಖಂಡರಾದ ಸೋಮಪ್ಪ,ಗ್ರಾಪಮ ಸದಸ್ಯರಾದ ಮೂಡಹಳ್ಳಿ ರವಿ, ಮೈಸೂರಿನ ಆಯುರ್ವೇದ ಸಂಆಓಧನಾ ಕೇಂದ್ರದ ಸಹಾಯಕ ನಿರ್ದೇಶಕ ಡಾ॥ಲಕ್ಷ್ಮೀನಾರಾಯಣ ಶೆಣೈ, ಜೆ.ಎಸ್.ಎಸ್ ಆಯುರ್ವೇದ ಕಾಲೇಜು ವೃದ್ಯರಾದ ಡಾ॥ ಸೀತಾದೇವಿ, ಡಾ॥ಮಂಜುನಾಥ್, ಡಾ॥ಶಶಿಕಿರಣ್, ಡಾ॥ವಿದ್ಯಾನಾರಾಯಣ್, ಡಾ॥ಅಚಿಜನಾ, ಗ್ರಾಮದ ಸರ್ಕಾರಿ ಶಾಲಾ ಮುಖ್ಯ ಶಿಕ್ಷಕಿ ಹೆಚ್.ಎಂ.ಶೋಭಾ, ಡಾ॥ಮಂಜುಪ್ರಸಾದ್ ಎಂ.ಕೆ ಮತ್ತು ಡಾ॥ಅಮೃತ ಎಸ್.ಜಿ ರವರು ಹಾಜರಿದ್ದರು.

ಶಿಬಿರದಲ್ಲಿ ಉಚಿತ ವೈದ್ಯಕೀಯ ತಪಾಸಣೆ, ಉಚಿತ ಆಯುವೇದ ಔಷಧಿ ವಿತರಣೆ, ಉಚಿತ ಮಧುಮೇಹ ತಪಾಸಣೆ, ಉಚಿತವಾಗಿ ರದೆಯ ಸಂಬಂಧಿ ಕಾಯಿಲೆಗಳಿಗೆ ECG, Echo, Blood test ಪರೀಕ್ಷೆ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿತ್ತು.

ಶಿಬಿರದಲ್ಲಿ ಸುಮಾರು 215 ಜನರು ಆರೋಗ್ಯ ತಪಾಸಣೆ, 115 ಜನರು ರಕ್ತ ಪರೀಕ್ಷೆ, 60 ಜನರಿಗೆ ECG, ಯನ್ನು ಉಚಿತವಾಗಿ ಮಾಡಲಾಯಿತು.ಈ ಎಲ್ಲಾ ಚಟುವಟಿಕೆಯಿಂದ ಗ್ರಾಮೀಣ ಪ್ರದೇಶದಲ್ಲಿ ಆಯೋಜಿಸಿದ ಈ ಶಿಬಿರವು ಅವಿಸ್ಮರಣಿಯ ಮತ್ತು ಯಶಸ್ವಿಯಾಯಿತು.










## 7.ಹೊಸಕೋಟೆಯಲ್ಲಿ ಆಯುರ್ವೇದ ದಿನಾಚರಣೆ–2018(ಆಯುರ್ ಕ್ವಿಜ್)

ರಾಷ್ಟ್ರೀಯ ಆಯುರ್ವೇದ ದಿನಾಚರಣೆಯ ಪ್ರಯುಕ್ತ ದಿನಾಂಕ:01–12–2018 ರಂದು ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರ,ಮೈಸೂರುರವರು ಶಾಲಾ ಮಕ್ಕಳಿಗಾಗಿ ವಿಶೇಷ ಆಯುರ್ ಕ್ವಿಜ್ ಕಾರ್ಯಾಕ್ರಮವನ್ನು ಶ್ರೀ ಗುರುಮಹಂತೇಶ್ವರ ಆಂಗ್ಲ ಮಾಧ್ಯಮ ಶಾಲೆ, ಹೊಸಕೋಟೆ ಮತ್ತು ನಗರ್ಲೆಶಾಲೆಗಳಲ್ಲಿ ಹಮ್ಮಿಕೊಳ್ಳಲಾಗಿತ್ತು. ಶಾಲಾ ಮಕ್ಕಳಿಗೆ ಆಯುರ್ವೇದ ಚಿಕಿತ್ಸೆ, ಆಯುರ್ವೇದದ ಜಾಗೃತಿ ಮತ್ತು ಅರಿವು ಹಾಗೂ ಗಿಡಮೂಲಿಕೆಗಳ ಪ್ರತ್ಯಕ್ಷತೆಯನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಾಕ್ರಮದ ಅಂಗವಾಗಿ ಶಾಲಾ ಮಕ್ಕಳಿಗೆ ಪ್ರಬಂಧ ಸ್ಪರ್ಧೆ, ಚಿತ್ರಕಲಾ ಸ್ಪರ್ಧೆ ಕ್ವಿಜ್ ಕಾರ್ಯಾಕ್ರಮ ಹಮ್ಮಿಕೊಂಡಿದ್ದು ವಿಜೇತರ ವಿವರ ಇಂತಿದೆ.

ಬಹುಮಾನ ಪಡೆದ ವಿದ್ಯಾರ್ಥಿಗಳ ವಿವರ

| | ರಸಪ್ರಶ್ನಾ ಸ್ಪರ್ಧೆ | ಪ್ರಬಂಧ ಸ್ಪರ್ಧೆ | ಚಿತ್ರಕಲಾ ಸ್ಪರ್ಧೆ |
|---|---|---|---|
| ಶ್ರೀ ಗುರುಮಹಂತೇಶ್ವರ ಆಂಗ್ಲ ಮಾಧ್ಯಮ ಶಾಲ್ | ಅರ್ಪಿತ –6ನೇ ತರಗತಿ<br>ಸೌಜನ್ಯ–6ನೇ ತರಗತಿ<br>ಪ್ರಶಾಂತ್–6ನೇ ತರಗತಿ<br>ಮಹದೇವಸ್ವಾಮಿ–6ನೇ ತರಗತಿ | ಮನೋಜ್‌ಕುಮಾರ್–7ನೇತರಗತಿ<br>ಸಹನ.ಎಚ್.ಎಂ–7ನೇ ತರಗತಿ<br>ಪ್ರಜ್ವಲಾ.ಎಷ್.ಎಂ–7ನೇ ತರಗತಿ | ವಿಶ್ವಾಸ್–ಪ್ರಥಮ ಬಹುಮಾನ(6ನೇ ತರಗತಿ)<br>ತನುಷ–ಎರಡನೇ ಬಹುಮಾನ(6ನೇ ತರಗತಿ)<br>ಪ್ರಸಾದ್–ಮೂರನೇ ಬಹುಮಾನ(6ನೇ ತರಗತಿ) |
| ನಾಗರ್ಲೆ ಸ್ಕೂಲ್ | ಪೂಜಾ–ಪ್ರಥಮ ಬಹುಮಾನ<br>ಪ್ರೀತಮ್–ಪ್ರಥಮಬಹುಮಾನ<br>ಯುಸಫ್‌ಮೊಹಮದ್–ಎರಡನೇ ಬಹುಮಾನ | ಯುಸಫ್‌ಮೊಹಮದ್–ಪ್ರಥಮ ಬಹುಮಾನ<br>ಯೋಗಿತ–ಎರಡನೇ ಬಹುಮಾನ | ———— |

ಕಾರ್ಯಾಕ್ರಮದಲ್ಲಿ ವಿಜೇತರಿಗೆ ಬಹುಮಾನವನ್ನು ಗುರುಮಹಂತೇಶ್ವರ ಹೊಸಕೋಟೆ ಪೀಠದ ಮಠಾದಿಶಾರುಗಳಾದ ಶ್ರೀ ಶ್ರೀ ಗುರು ಸ್ವಾಮೀಜಿಯವರು ನೀಡಿದರು ಶಾಲೆಯ ಮುಖ್ಯಶಿಕ್ಷಕಿಯಾದ ಶೋಭಾರವರು, ಆಯುರ್ವೇದ ಸಂಶೋಧನಾ ಕೇಂದ್ರದ ಸಹಾಯಕ ನಿರ್ದೇಶಕರಾದ ಡಾ||ಲಕ್ಷ್ಮೀ ನಾರಾಯಣ ಶೆಣೈ, ವೈದ್ಯರಾದ ಡಾ||ಮಂಜುಪ್ರಸಾದ್.ಎಂ.ಕೆ, ಡಾ||ಸುಪ್ರಿತ ಹಾಗೂ ಬೋಧಕ ,ಬೋಧಕೇತರ ವೃಂದ, ಮತ್ತು ವಿದ್ಯಾರ್ಥಿ, ವಿದ್ಯಾರ್ಥಿನಿಯರು ಹಾಜರಿದ್ದರು.


ಶ್ರೀ ಬಸವಣ್ಣಸ್ವಾಮಿ ಬಾಲ ಕಲಾ ಮಂದಿರ



## 8.ಸರ್ಕಾರಿ ಪ್ರೌಢಶಾಲೆ ಹೂಟಗಳ್ಳಿಯಲ್ಲಿ ಆಯುರ್ವೇದ ದಿನಾಚರಣೆ

ದಿನಾಂಕ 04–12–2018ರಂದು ಮೈಸೂರು ನಗರದ ಸರ್ಕಾರಿ ಪ್ರೌಢಶಾಲೆ ಹೂಟಗಳ್ಳಿ ಮೈಸೂರುನಲ್ಲಿ ಆಯುರ್ವೇದ ಜಾಗೃತಿ ಮತ್ತು ಗಿಡಮೂಲಿಕೆಗಳ ಪ್ರದರ್ಶನವನ್ನು ಆಯುರ್ವೇದ ಸಂಶೋಧನಾ ಕೇಂದ್ರ ಮೈಸೂರುರವರು ಆಯೋಜಿಸಿದ್ದರು.

ಶಾಲೆಯ ವಿದ್ಯಾರ್ಥಿಗಳಿಗೆ ಆಯುರ್ವೇದ ಸಂಶೋಧನಾ ಕೇಂದ್ರ ಮೈಸೂರು ವತಿಯಿಂದ ಗಿಡಮೂಲಿಕೆಗಳ ಬಗ್ಗೆ ಅರಿವು ಮತ್ತು ಆಯುರ್ವೇದದ ಜಾಗೃತಿ ಕಾರ್ಯಾಕ್ರಮವನ್ನು ರಾಷ್ಟ್ರೀಯ ಆಯುರ್ವೇದ ದಿನಾಚರಣೆಯ ಪ್ರಯುಕ್ತ ಏರ್ಪಡಿಸಲಾಯಿತ್ತು.

ಸಮಾರಂಭದಲ್ಲಿ ಆಯುರ್ವೇದ ಬಗ್ಗೆ ದಿನಾಚರ್ಯೆ, ಋತುಚರ್ಯೆ,ಮನೆಮದ್ದು,ಗಿಡಮೂಲಿಕೆಗಳ ಪರಿಚಯವನ್ನು ಆಯುರ್ವೇದ ಸಂಶೋಧನಾ ಕೇಂದ್ರದ ಸಹಾಯಕ ನಿರ್ದೇಶಕರಾದ ಡಾ॥ಎಲ್.ಎನ್.ಶೆಣೈ, ಡಾ॥ಮಂಜುಪ್ರಸಾದ್‌ರವರು ಆಯುರ್ವೇದದ ಬಗ್ಗೆ ಸುಮಾರು 200 ವಿದ್ಯಾರ್ಥಿಗಳಿಗೆ ಸಂಕ್ಷಿಪ್ತ ಪರಿಚಯವನ್ನು ನೀಡಿದರು.

ಆಯುರ್ವೇದ ಮತ್ತು ಗಿಡಮೂಲಿಕೆಗಳ ಜಾಗೃತಿ ಕಾರ್ಯಾಕ್ರಮದ ನಂತರ ಅದರ ವಿಷಯವಾಗಿ “ಆಯುರ್ ಕ್ವಿಜ್”ಅನ್ನು ಶಾಲೆಯ ಮುಖ್ಯಶಿಕ್ಷಕಿ ಸಂಗೀತರವರ ಸಂಮುಖದಲ್ಲಿ ಶಾಲೆಯ ವಿದ್ಯಾರ್ಥಿಗಳಿಗೆ ನಡೆಸಲಾಯಿತು

ಕಾರ್ಯಾಕ್ರಮದಲ್ಲಿ ವಿಜೇತರಿಗೆ ಬಹುಮಾನವನ್ನು ಶಾಲೆಯ ಮುಖ್ಯ ಶಿಕ್ಷಕಿ ಸಂಗೀತರವರು ವಿತರಿಸಿದರು.ಆಯುರ್ವೇದ ಸಂಶೋಧನಾ ಕೇಂದ್ರದ ಸಹಾಯಕ ನಿರ್ದೇಶಕರಾದ ಡಾ॥ಲಕ್ಷ್ಮೀ ನಾರಾಯಣ

ಶೆಣೈ, ವೈದ್ಯರಾದ ಡಾ॥ಮಂಜುಪ್ರಸಾದ್.ಎಂ.ಕೆ, ಹಾಗೂ ಬೋಧಕ ,ಬೋಧಕೇತರ ವೃಂದ, ಮತ್ತು ವಿದ್ಯಾರ್ಥಿ, ವಿದ್ಯಾರ್ಥಿನಿಯರು ಹಾಜರಿದ್ದರು.






ರಾಷ್ಟ್ರೀಯ ಆಯುರ್ವೇದ ದಿನಾಚರಣೆಯ ಅಂಗವಾಗಿ
"ಆಯುರ್ವೇದ ಜಾಗೃತಿ ಮತ್ತು ಅರಿವು ಕಾರ್ಯಕ್ರಮ"

## 9.ಆಯುರ್ವೇದ ಜಾಗೃತಿ ಮತ್ತು ಆಯುರ್ವೇದ ಗಿಡಮೂಲಿಕೆಗಳ ಪ್ರಾತ್ಯಕ್ಷತೆ

ದಿನಾಂಕ 06–12–2018ರಂದು ರಾಷ್ಟ್ರೀಯ ಆಯುರ್ವೇದ ದಿನಾಚರಣೆಯ 2018 ಪ್ರಯುಕ್ತ ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರ, ಮೈಸೂರು ಇದರ ವತಿಯಿಂದ ಶ್ರೀ ಸತ್ಯಸಾಯಿ ಬಾಬ ಹೈಸ್ಕೂಲ್ ಜೈಲಕ್ಷ್ಮಿಪುರಂ ಇಲ್ಲಿ ಆಯುರ್ವೇದ ಜಾಗೃತಿ ಮತ್ತು ಆಯುರ್ವೇದ ಗಿಡಮೂಲಿಕೆಗಳ ಪ್ರಾತ್ಯಕ್ಷತೆಯನ್ನು ಹಮ್ಮಿಕೊಳ್ಳಲಾಗಿತ್ತು.ಈ ಕಾರ್ಯಾಕ್ರಮದಲ್ಲಿ ವಿದ್ಯಾರ್ಥಿಗಳಿಗೆ 'ಆಯುರ್ ಕ್ವಿಜ್', ವೈಜ್ಞಾನಿಕ ಪ್ರಾಜೆಕ್ಟ್‌ಗಳ ತಯಾರಿಕೆಗಾಗಿ ವಿವಿಧ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿತ್ತು. ವಿದ್ಯಾರ್ಥಿಗಳಲ್ಲಿ ವಿಜ್ಞಾನದ ಸಂಶೋಧನೆಗಳ ಬಗ್ಗೆ ಅರಿವು ಮತ್ತು ಆಯುರ್ವೇದ ಬಗ್ಗೆ ಜಾಗೃತಿಯನ್ನು ಮೂಡಿಸಲು ಈ ವಿಶೇಷ ಅಭಿಯಾನವನ್ನು ಪ್ರೌಢಶಾಲ ವಿದ್ಯಾರ್ಥಿಗಳಿಗೆ ಆಯುಷ್ ಇಲಾಖೆಯ ವತಿಯಿಂದ ಹಮ್ಮಿಕೊಳ್ಳಲಾಗಿತ್ತು

"ಕ್ವಿಜ್' ಕಾರ್ಯಾಕ್ರಮವನ್ನು ಹಮ್ಮಿಕೊಂಡಿದ್ದು ವಿಜೇತರ ವಿವರ ಇಂತಿದೆ. ಪ್ರಜ್ವಲ್ ಪ್ರಥಮ, ಭವಾನಿ ದ್ವಿತೀಯ, ರತ್ನಸಾಗರ್ ತೃತೀಯ ಹಾಗು ಯಶ್ವಂತ್ ರವರು ನಾಲ್ಕನೇ ಸ್ಥಾವನ್ನು ಪಡೆದರು ಸಮಾದಾನಕರ ಬಹುಮಾನವನ್ನು ಸಂಜನ ಆರ್ ಬಾವನ ಎನ್, ಸಾನಿಕ, ವೇಣೂಗೋಪಾಲ್, ಹೇಮಂತ್.ಡಿ. ನೀತೀಶ್ ಎನ್., ಪ್ರಜ್ವಲ್ ಎಂ., ರಮ್ಯ, ಪುರುಷೋತ್ತಮ್, ಸಚಿನ್, ತನುಶ್ರೀ, ಶಿವಾನಿ ಚಂದುರವರು ಪಡೆದಿರುತ್ತಾರೆ.

ವೈಜ್ಞಾನಿಕ ವಸ್ತು ಪ್ರದರ್ಶನದಲ್ಲಿ ಎಲ್.ಕೆ.ಜಿ. ವಿಭಾಗದಲ್ಲಿ ಪರೀಷಿತ ಯು.ಕೆ.ಜಿ. ವಿಭಾಗದಲ್ಲಿ ಮೂರ್ವಿ ಪ್ರಥಮ ಗೌಡ 1 ರಿಂದ 4 ನೇ ತರಗತಿಯ ವಿಭಾಗದಲ್ಲಿ ಪ್ರವನ್ಯ, ದೀಕ್ಷಿತ ಹಾಗೂ ರಿಯ ಇವರುಗಳು ಬಹುಮಾನವನ್ನು ಪಡೆದಿರುತ್ತಾರೆ.

5 ರಿಂದ 7ನೇ ತರಗತಿ ವಿಭಾಗದಲ್ಲಿ ಸಿಂಚನ, ಕಿಶೋರ್.ಕೆ, ಪ್ರಜ್ವಲ್.ಡಿ. ರವರು ವಿವಿಧ ಕ್ಷೇತ್ರದಲ್ಲಿ ಬಹುಮಾನವನ್ನು ಪಡೆದಿರುತ್ತಾರೆ

ಪ್ರೌಢಶಾಲಾ ವಿಭಾಗದಲಿ, ಲಕ್ಷ್ಮಿ, ಜೈಜಗದೀಶ್ , ಜಯಂತ್ ರವರು ವಿವಿಧ ಕ್ಷೇತ್ರದಲ್ಲಿ ಬಹುಮಾನವನ್ನು ಪಡೆದಿರುತ್ತಾರೆ.

ಕಾರ್ಯಾಕ್ರಮದ ಕೊನೆಯಲ್ಲಿ ಸ್ಪರ್ದಾ ವಿಜೇಯತರಿಗೆ ಆಯುರ್ವೇದ ಸಂಶೋಧನಾ ಕೇಂದ್ರದ ಪರವಾಗಿ ಬಹುಮಾನವನ್ನು ವಿತರಿಸಲಾಯಿತು. ಬಹುಮಾನ ವಿತರಣ ಕಾರ್ಯಾಕ್ರಮದಲ್ಲಿ ಆಯುರ್ವೇದ ಸಂಶೋಧನಾ ಕೇಂದ್ರದ ಸಹಾಯಕ ನಿರ್ದೇಶಕರಾದ ಡಾ॥ಲಕ್ಷ್ಮೀನಾರಾಯಣಶೆಣೈ, ಪ್ರೌಢಶಾಲೆಯ ಪ್ರಾಚಾರ್ಯರಾದ ತ್ರಿಮೂರ್ತಿರವರು, ವೈದ್ಯರಾದ ಡಾ॥ ಮಂಜುಪ್ರಸಾದ್ ಮತ್ತು ಬೋಧಕ ವೃಂದ,ಬೋಧಕೇತರ ವೃಂದ ಮತ್ತು ವಿದ್ಯಾರ್ಥಿ, ವಿದ್ಯಾರ್ಥಿನಿಯರು ಹಾಜರಿದ್ದರು.


ರಾಷ್ಟ್ರೀಯ ಆಯುರ್ವೇದ ದಿನಾಚರಣೆಯ ಅಂಗವಾಗಿ
“ಆಯುರ್ವೇದ ಜಾಗೃತಿ ಮತ್ತು ಅರಿವು ಕಾರ್ಯಕ್ರಮ”



# 10.ಉಚಿತ ಆರೋಗ್ಯ ಶಿಬಿರ

ದಿನಾಂಕ 06-12-2018ರಂದು ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರ ಮೈಸೂರುರವರ ವತಿಯಿಂದ ರಾಷ್ಟ್ರೀಯ ಆಯುರ್ವೇದ ದಿನಾಚರಣೆಯ ಅಂಗವಾಗಿ ಹಿರಿಯ ನಾಗರೀಕರ ಹಗಲು ಯೋಗಕ್ಷೇಮ ಕೇಂದ್ರ ನಿಮಿಷಾಂಭ ನಗರ ವಿವೇಕಾನಂದ ವೃತ್ತದಲ್ಲಿ ಉಚಿತ ಆಯುರ್ವೇದ ಚಿಕಿತ್ಸೆಯನ್ನು ತಪಾಸಣೆ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು ವಿಶೇಷವಾಗಿ ಹಿರಿಯ ನಾಗರೀಕತೆ ಆರೋಗ್ಯದ ದೃಷ್ಟಿಯಿಂದ ಅವರಿಗೆ ಉಚಿತ ಆಯುರ್ವೇದ ತಪಾಸಣೆ ಮತ್ತು ಆಯುರ್ವೇದದ ಔಷಧಿ ವಿತರಣೆಯನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ಉದ್ಘಾಟನೆಯನ್ನು ಕೃಷ್ಣರಾಜಕ್ಷೇತ್ರದ ಶಾಸಕರಾದ ಎಸ್.ಎ.ರಾಮದಾಸ್‌ರವರು ನೆರವೇರಿಸಿದರು ಅವರು ತಮ್ಮ ಉದ್ಘಾಟನಾ ಭಾಷಣದಲ್ಲು ಕೇಂದ್ರ ಸರ್ಕಾರದ ಆಯುಷ್ಮಾನ್ ಭಾರತ ಕಾರ್ಯಕ್ರಮವು ಪ್ರತಿಯನ್ನು ನಾಗರೀಕರಿಗೆ 8 ಲಕ್ಷದವರೆಗೆ ಆರೋಗ್ಯದ ಖಾತ್ರಿಯನ್ನು ನೀಡುತ್ತದೆ.ಅದರ ಸದುಪಯೋಗವನ್ನು ಹಿರಿಯ ನಾಗರಿಕರು ಪಡೆಯಬೇಕೆಂದು ತಮ್ಮ ಭಾಷಣದಲ್ಲಿ ತಿಳಿಸಿದರು.ಎಲ್ಲರಿಗೂ ಆರೋಗ್ಯ ಎಲ್ಲೆಡೆಯು ಆರೋಗ್ಯದ ಪರಿಕಲ್ಪನೆಯಡಿಯಲ್ಲಿ ಕೃಷ್ಣರಾಜ ವಿಧಾನ ಸಭಾ ಕ್ಷೇತ್ರದಲ್ಲು ಹಲವು ಆರೋಗ್ಯದ ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ದಿನಾಂಕ 25-12-2018ರಂದು ಜಯನಗರದಲ್ಲಿ ವಿಶೇಷ ಆರೋಗ್ಯ ಶಿಬಿರವನ್ನು ಸಹ ಏರ್ಪಡಿಸಿದ್ದು ಅದಕ್ಕೆ ಎಲ್ಲರೂ ಭಾಗವಹಿಸಲು ಕರೆಯಿತ್ತರು.

ಕಾರ್ಯಕ್ರಮದಲ್ಲಿ ಸ್ಥಳೀಯ ಸದಸ್ಯರಾದ ಶ್ರೀಯುತ ಶರತ್‌ರವರು, ಮೈಸೂರು ಯೋಗ ಒಕ್ಕುಟದ ಶ್ರೀಯುತ ಶಾಂತರಾಮ್‌ರವರು, ಹಿರಿಯ ವೈದ್ಯರಾದ ಡಾ॥ನಾಗೇಶ್,ಡಾ॥ಸದಾನಂದ್, ಡಾ॥ಪಲ್ಲವಿಯವರು ಹಾಜರಿದ್ದರು. ಆಯುರ್ವೇದ ಸಂಶೋಧನಾ ಕೇಂದ್ರದ ಸಹಾಯಕ ನಿರ್ದೇಶಕರಾದ ಡಾ॥ಲಕ್ಷ್ಮಿ ನಾರಾಯಣ ಶೆಣೈರವರು ಎಲ್ಲರಿಗೂ ಸ್ವಾಗತವನ್ನು ಕೋರಿದರು. ಹಿರಿಯ ನಾಗರಿಕರ ರಕ್ಷಣ ಕೇಂದ್ರದ ಶ್ರೀ ಪ್ರಭು ಸ್ವಾಮಿಯರವು ಕಾರ್ಯಕ್ರಮದ ಕೊನೆಯಲ್ಲಿ ವಂದನಾರ್ಪಣೆ ಗೈದರು.

ಕಾರ್ಯಕ್ರಮದಲ್ಲಿ ನಾರಾಯಣ ಹೃದಯಾಲಯದ ಹಿರಿಯ ವೈದ್ಯರ ತಂಡ, ಮಧುಮೇಹ, ರಕ್ತದೊತ್ತಡ,ಹೃದಯ ಸಂಬಂಧಿ ಖಾಯಿಲೆಯ ತಪಾಸಣೆ, ಮೂಳೆ ರೋಗದ ತಪಾಸಣೆಗೆ ಸಂಬಂಧ ಪಟ್ಟ ರಕ್ತ ಪರೀಕ್ಷೆಗಳ ಮೂಳೆ ರಾಂದ್ರತೆ ಪರೀಕ್ಷೆ, ಇ.ಸಿ.ಜಿ ಪರೀಕ್ಷೆಗಳನ್ನು ಉಚಿತವಾಗಿ ನಡೆಸಲಾಯಿತು.ಕಾರ್ಯಕ್ರಮದಲ್ಲಿ

ಸುಮಾರು 150 ಜನ ಹಿರಿಯ ನಾಗರೀಕರು ಉಚಿತ ಆಯುರ್ವೇದ ತಪಾಸಣೆ ಮತ್ತು ಔಷಧಿ ವಿತರಣೆಯ ಶಿಬಿರದ ಪ್ರಯೋಜನವನ್ನು ಪಡೆದುಕೊಂಡರು.

ಈ ಕಾರ್ಯಕ್ರಮದಲ್ಲಿ ಜೆ.ಎಸ್.ಎಸ್. ಆಯುರ್ವೇದ ಕಾಲೇಜಿನ ಹಿರಿಯ ವೈದ್ಯರ ತಂಡ ಮತ್ತು ಕಿರಿಯ ವೈದ್ಯರ ತಂಡ ಸಹ ಭಾಗವಹಿಸಿದರು.














# 11.ಹಾಸನದಲ್ಲಿ ಆಯುರ್ವೇದ ಆರೋಗ್ಯ ಶಿಬಿರ

ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರ,ಮೈಸೂರು ಇದರ ವತಿಯಿಂದ ಶ್ರೀಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಕಾಲೇಜಿನಲ್ಲಿ ದಿನಾಂಕ:13–12–2019 ರಂದು "ಆಯುರ್ವೇದ ಆಹಾರ ಮೇಳ"ವನ್ನು ಸಾರ್ವಜನಿಕರಿಗಾಗಿ ರಾಷ್ಟ್ರೀಯ ಆಯುರ್ವೇದ ದಿನಾಚರಣೆಯ ಪ್ರಯುಕ್ತ ಹಮ್ಮಿಕೊಳ್ಳಲಾಗಿತ್ತು. ಆಯುರ್ವೇದದಲ್ಲಿ ಹೇಳುವ ಪಥ್ಯ–ಅಪಥ್ಯಗಳ ಅರಿವನ್ನು ಜನರಿಗೆ ಮೂಡಿಸಲು ಹಾಗೂ ಔಷಧಿಯೇ ಆಹಾರವೆಂಬ ವಿಚಾರವನ್ನು ಸಹ ಸಾರ್ವಜನಿಕರಿಗೆ ತಿಳಿಸಲು ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ಉದ್ಘಾಟನೆಯನ್ನು ಆಯುಷ್ ಆಯುಕ್ತರಾದ ಶ್ರೀಮತಿ ಮೀನಾಕ್ಷಿ ನೇಗಿಯವರು ನಿರ್ವಹಿಸಿದ್ದರು.ಉತ್ತಮ ಆರೋಗ್ಯಕ್ಕೆ ಆಹಾರವೇ ಮುಖ್ಯಉತ್ತಮ ಆಹಾರವನ್ನು ಜನರು ಉಪಯೋಗಿಸಿದಲ್ಲಿ ಎಲ್ಲರಿಗೂ ಆರೋಗ್ಯ ದೊರಕುವುದು ಮತ್ತು 2025ರಲ್ಲಿ ಎಲ್ಲರಿಗೂ ಆರೋಗ್ಯ, ಎಲ್ಲೆಡೆಯು ಆರೋಗ್ಯದ ಚಿಂತನೆ ನನಸಾಗುತ್ತದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸುಮಾರು 40 ವಿಭಾಗಗಳಲ್ಲಿ ಆಹಾರ ಖಾದ್ಯಗಳನ್ನು ಆಯುರ್ವೇದದ ರೀತಿ ತಯಾರಿಸಿ ಪ್ರದರ್ಶನಕ್ಕಿಡಲಾಗಿತ್ತು. ಕೇರಳ,ಮಹಾರಾಷ್ಟ್ರ,ಆಂಧ್ರಪ್ರದೇಶ,ಗುಜರಾತ್,ಮಧ್ಯಪ್ರದೇಶ,ಉತ್ತರ ಪ್ರದೇಶ,ತಮಿಳುನಾಡಿನ ಆಹಾರ ಖಾದ್ಯಗಳನ್ನು ಆಯುರ್ವೇದದ ರೀತಿಯಲ್ಲಿ ತಯಾರಿಸಿ ಜನರಿಗೆ ಅದರ ಉಪಯೋಗಗಳನ್ನು ಮನವರಿಗೆ ಮಾಡಿ ಕೊಡಲಾಯಿತು. ಕಾರ್ಯಕ್ರಮವನ್ನು ಬೆಳಿಗ್ಗೆ 10 ರಿಂದ ಸಾಯಂಕಾಲ 04 ರ ತನಕ ನಡೆಸಲಾಗಿತ್ತು ಹಾಗೂ ಸುಮಾರು 1000ಕ್ಕೂ ಅಧಿಕ ಜನರು ಆಹಾರದ ತಯಾರಿಕಾ ಮಾಹಿತಿಯನ್ನು ಹಾಗೂ ಉಪಯೋಗಗಳನ್ನು ಪಡೆದುಕೊಂಡರು. ಕಾರ್ಯಕ್ರಮದ ಕೊನೆಯಲ್ಲಿ ಆಯುರ್ವೇದ ಸಂಶೋಧನಾ ಕೇಂದ್ರದ ಪರವಾಗಿ ಅತ್ಯುತ್ತಮ ಆಹಾರವನ್ನು ತಯಾರಿಸಿದ ತಂಡಕ್ಕೆ ವಿವಿಧ ವಿಭಾಗಗಳಲ್ಲಿ ಪ್ರಶಸ್ತಿ ಮತ್ತು ಪ್ರಮಾಣ ಪತ್ರಗಳನ್ನು ವಿತರಿಸಲಾಯಿತು.

ಕಾರ್ಯಕ್ರಮಲ್ಲಿ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಕಾಲೇಜಿನ ಪ್ರಾಚಾರ್ಯರಾದ ಡಾ॥ಪ್ರಸನ್ನ ನರಸಿಂಹರಾವ್, ಜೆ.ಎಸ್.ಎಸ್ ಕಾಲೇಜಿನ ಪ್ರಾಧ್ಯಾಪಕರಾದ ಡಾ॥ಗುರು ಬಸವರಾಜ್, ಎಸ್.ಡಿ.ಎಮ ಕಾಲೇಜಿನ ಮೇಡಿಕಲ್ ಸೂಪರಿಟೆಂಡೆಂಟ್‌ರಾದ ಡಾ॥ಮುರುಳೀಧರ ಪ್ರಾಚರ್ ಹಾಗೂ ಆಯುರ್ವೇದ ಸಂಶೋಧನಾ ಕೇಂದ್ರದ ಸಹಾಯಕ ನಿರ್ದೇಶಕರಾದ ಡಾ॥ಲಕ್ಷ್ಮೀನಾರಾಯಣ ಶೆಣೈ ರವರುಗಳು ಉಪಸ್ಥಿತರಿದ್ದರು.




SRI DHARMASTHALA MANJUNATHESHWARA
COLLEGE OF AYURVEDA & HOSPITAL, HASSAN
AYURVEDA AAHARA MELA




AYURVEDA AAHARA MELA


AYURVEDA AAHARA MELA

# 12.ಗ್ರಾಮೀಣ ಪ್ರದೇಶದಲ್ಲಿ ಉಚಿತ ಆಯುರ್ವೇದ ತಪಾರಣಾ ಮತ್ತು ಹೃದ್ರೋಗ ಜಾಗೃತಿ ಶಿಬಿರ

ದಿನಾಂಕ 23–12–2018ರಂದು ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರ ಮೈಸೂರು ಹಾಗೂ ಅರ್ಕಧಾಮ ಗದ್ದಿಗೆ ರಸ್ತೆರವರು  ಕಣಿಯನಹುಂಡಿಯಲ್ಲಿ ಆಯುರ್ವೇದ ದಿನಾಚರಣೆಯ ಪ್ರಯುಕ್ತ ಉಚಿತ ಆಯುರ್ವೇದ ತಪಾಸಣಾ ಶಿಬಿರವನ್ನು ನಡೆಸಿದರು. ಈ ಶಿಬಿರದಲ್ಲಿ ರೋಗಿಗೆ ಉಚಿತ ತಪಾಸಣೆ ಹಾಗೂ ಉಚಿತ ಔಷಧಿ ವಿತರಣೆ ಹಾಗೂ ವಿಶೇಷವಾಗಿ ಹೃದಯ ತಪಾಸಣೆ, ಮೂಳೆ ರೋಗದ ತಪಾಸಣೆಯನ್ನು ಮಾಡಿಸಲಾಯಿತು.

ಶಿಬಿರದ ಉದ್ಘಾಟನೆಯನ್ನು ಶ್ರೀಮತಿ ಜ್ಯೋತಿಶ್ರೀಧರ್ (ಐ.ಎ.ಎಸ್) ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳು ನೇರವೇರಿಸುತ್ತಾ ಗ್ರಾಮೀಣ ಪ್ರದೇಶದ ಜನರು ಆರೋಗ್ಯ ತಪಾಸಣೆಯನ್ನು ನಿರಂತರವಾಗಿ ಮಾಡುವುದು ಅವಶ್ಯ. ಆಯುರ್ವೇದ ಭಾರತೀಯ ವೈದ್ಯ ಪದ್ದತಿಯಾಗಿದ್ದು ಈ ಪದ್ದತಿಯ ಚಿಕಿತ್ಸೆ ಪ್ರಾಚೀನವಾದದು ಮತ್ತು ಜನರು ಇದರ ಸದುಪಯೋಗವನ್ನು ಪಡೆದು ಆರೋಗ್ಯವನ್ನು ಕಾಪಾಡಿಕೊಳ್ಳಬೇಕೆಂಬ ಸಲಹೆ ನೀಡಿದರು ಹಾಗೂ ಇಂತಹ ಶಿಬಿರಗಳು ಗ್ರಾಮೀಣ ಪ್ರದೇಶದಲ್ಲಿ ಹೆಚ್ಚು ಹೆಚ್ಚಾಗಿ ನಡೆಯಬೇಕೆಂದು ಆಶಿಸಿದರು ಸಮಾರಂಭದಲ್ಲಿ ಖ್ಯಾತ ಉದ್ಯಮಿ ಡಾ॥ ಬಿ.ಆರ್.ಪೈರವರು ಉಪಸ್ಥಿತರಿದ್ದರು ಕಾರ್ಯಕ್ರಮದಲ್ಲಿ ವೈದ್ಯ ದಂಪತಿಗಳಾದ ಡಾ॥ನಾಗೇಶ್ ಹಾಗೂ ಡಾ॥ಮಧುಮತಿಯವರನ್ನು ಅವರ ಸೇವಾ ಚಟುವಟಿಕೆಗಳಿಗಾಗಿ ಸನ್ಮಾನಿಸಲಾಯಿತು ಹಾಗೂ ಹಿರಿಯ ವೈದ್ಯರು , ಸ್ವಾತಂತ್ರ್ಯ ಹೋರಾಟಗಾರರಾದ ಡಾ॥ಎಂ.ಜಿ.ಕೃಷ್ಣಮೂರ್ತಿಯವರನ್ನು  ಸನ್ಮಾನಿಸಲಾಯಿತು.

ಶಿಬಿರದ ಸಭಾ ಕಾರ್ಯಕ್ರಮದ ದಿವ್ಯಸಾನಿಧ್ಯವನ್ನು ಶ್ರೀ ಶ್ರೀನಿವಾಸ ಅರ್ಕರವರು ವಹಿಸಿ ಆಶೀರ್ವಚನವನ್ನು ನೀಡಿದರು.  ಗ್ರಾಮೀಣ ಜನರು ಆರೋಗ್ಯವನ್ನು ಕಾಪಾಡಲು ಹಲವು ಸೂತ್ರಗಳನ್ನು ತಮ್ಮ ಆಶೀರ್ವಚನದಲ್ಲಿ ಜನರಿಗೆ ತಿಳಿಸಿದರು ಮತ್ತು ಇಂತಹ ಆರೋಗ್ಯ ಶಿಬಿರಗಳನ್ನು ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಾಗಿ ತಮ್ಮ ಸಂಸ್ಥೆಯಿಂದ ನಡೆಸಲಾಗುವುದು ಎಂದು ತಿಳಿಸಿದರು. ಶಿಬಿರದಲ್ಲಿ ನಾರಾಯಣ ಹೃದಯಾಲಯ, ಜೆ.ಎಸ್.ಎಸ್ ಆಯುರ್ವೇದ ಕಾಲೇಜಿನ ತಜ್ಞ ವೈದ್ಯರು ಭಾಗವಹಿಸಿದ್ದರು. ಶಿಬಿರದಲ್ಲಿ ಸುಮಾರು 200ಕ್ಕಿಂತ ಹೆಚ್ಚು ರೋಗಿಗಳಿಗೆ ಇ.ಸಿ.ಜಿ , ಮೂಳೆಸಾಂಧ್ರತೆ, ರಕ್ತದೊತ್ತಡ, ಮಧುಮೇಹ ರಕ್ತ ಪರೀಕ್ಷೆಗಳನ್ನು ಹಾಗೂ ಔಷಧಿಗಳನ್ನು ಸಹ ಉಚಿತವಾಗಿ ನೀಡಲಾಯಿತು. ಶಿಬಿರದಲ್ಲಿ ಆಯುರ್ವೇದ ಸಂಶೋಧನಾ ಕೇಂದ್ರದ ಸಹಾಯಕ ನಿರ್ದೇಶಕರಾದ ಡಾ॥ಲಕ್ಷ್ಮೀನಾರಾಯಣ ಶೆಣೈ, ಡಾ॥ದೀಪಾ,ಡಾ॥ಅಂಜನಾ, ಡಾ॥ಪಲ್ಲವಿ,ಡಾ॥ ಸಂಗೀತಾ,ಡಾ॥ರಿನ್ಸಿ, ಡಾ॥ಸುಪ್ರೀತಾ,ಡಾ॥ಮಂಜುಪ್ರಸಾದ್ ರವರು ಹಾಜರಿದ್ದ ರೋಗಿಗಳ ತಪಾಸಣೆಯನ್ನು ನಡೆಸಿದ್ದರು.









# PHOTO GALLERY















AYURVEDA AAHARA MELA







# ಮೈಸೂರಲ್ಲಿ ಆಯುರ್ ದೀಪೋತ್ಸವ



ಮೈಸೂರಿನ ಆಯುರ್ವೇದ ವೃತ್ತದಲ್ಲಿ 'ಆಯುರ್ ದೀಪೋತ್ಸವ' ಕಾರ್ಯಕ್ರಮ ನಡೆಯಿತು.

ಮೈಸೂರು, ನ.8(ಎಂಕೆ)– ಮೈಸೂರು ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಮೈಸೂರು ಸರ್ಕಾರಿ ಆಯುರ್ವೇದ ಹೈ-ಟೆಕ್ ಪಂಚಕರ್ಮ ಆಸ್ಪತ್ರೆ ಮೈಸೂರು ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರದ ಸಂಯುಕ್ತ ಆಶ್ರಯದಲ್ಲಿ 'ರಾಷ್ಟ್ರೀಯ ಆಯುರ್ವೇದ ದಿನಾಚರಣೆ', 'ಧನ್ವಂತರಿ ಜಯಂತಿ' ಹಾಗೂ 'ಆಯುರ್ ದೀಪೋತ್ಸವ' ನಡೆಯಿತು.

ಮೈಸೂರಿನ ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮವನ್ನು ಕಾವೇರಿ ಆಸ್ಪತ್ರೆ ನಿರ್ದೇಶಕ ಡಾ. ಜಿ.ಆರ್.ಚಂದ್ರಶೇಖರ್ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ದೇಶದಲ್ಲಿ ಆಯುರ್ವೇದ ಔಷಧಗಳಿಗೆ ಹೆಚ್ಚಿನ ಬೇಡಿಕೆ ಇದ್ದು, ಹಲವಾರು ಕಾಯಿಲೆ ಗಳನ್ನು ಗುಣಪಡಿಸಬಹುದಾಗಿದೆ. ಸರ್ಕಾರ ಆಯುರ್ವೇದ ಕಾಲೇಜುಗಳ ಅಭಿವೃದ್ಧಿಗೆ ಹಲವಾರು ಯೋಜನೆಗಳನ್ನು ರೂಪಿಸಿದೆ. ಆದರೆ, ಯೋಜನೆಗಳನ್ನು ಸರಿಯಾಗಿ ಬಳಸಿಕೊಳ್ಳಬೇಕು ಎಂದರು.

ಸಂಸ್ಕೃತ ವಿಲಾಸ ಪಾಠಶಾಲೆಯ ಪ್ರಾಧ್ಯಾಪಕ ಗಣಪತಿ ಭಟ್ ಮಾತನಾಡಿ, ಭಾರತೀಯರ ಜೀವನ ಪದ್ಧತಿ ಕೆಲವರಿಗೆ ವಿಚಿತ್ರವಾದರೆ, ಇನ್ನೂ ಕೆಲವರಿಗೆ ವಿಶೇಷವಾಗಿದೆ. ಅಂತ್ಯವಿಲ್ಲದ ಜಲರಾಶಿ ತೆರೆದು ಕೊಳ್ಳುವಂತೆ ಈ ದೇಶದ ಸಂಸ್ಕೃತಿ ತೆರೆದುಕೊಳ್ಳುತ್ತದೆ. ಬೆಳಗ್ಗೆ ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ ನಾವು ಧಾರ್ಮಿಕ ಆವರಣದಲ್ಲಿ ಬದುಕುತ್ತಿದ್ದೇವೆ ಎಂದರು.

**ಆಯುರ್ ದೀಪೋತ್ಸವ:** 'ಆರೋಗ್ಯಕ್ಕಾಗಿ ದೀಪ ಹಚ್ಚೋಣ ಬನ್ನಿ' ಎಂಬ ಸಂದೇಶದೊಂದಿಗೆ ನೂರಾರು ವಿದ್ಯಾರ್ಥಿಗಳು ದೀಪಗಳನ್ನು ಹಿಡಿದು ಆಯುರ್ವೇದ ವೃತ್ತದಲ್ಲಿ ಬೆಳಕಿನ ಆಯುರ್ ದೀಪೋತ್ಸವ ನಡೆಸಿದರು. ಇದಕ್ಕೂ ಮೊದಲು ಆಯುರ್ ದೀಪೋತ್ಸವಕ್ಕೆ ಆಕಾಶವಾಣಿ ಉಪನಿರ್ದೇಶಕ ಹೆಚ್.ಶ್ರೀನಿವಾಸ್ ಚಾಲನೆ ನೀಡಿ, ವಿದ್ಯಾರ್ಥಿಗಳೊಂದಿಗೆ ಭಾಗಿಯಾದರು. ನೂರಾರು ವಿದ್ಯಾರ್ಥಿಗಳು ದೀಪಗಳನ್ನು ಹಿಡಿದು ಆಯುರ್ವೇದ ವೃತ್ತವನ್ನು ಸುತ್ತಿ, ಆಯುರ್ವೇದಕ್ಕೆ ಹಾಗೂ ಧನ್ವಂತರಿಗೆ ಜೈಕಾರ ಕೂಗಿದರು. ನಂತರ ವೃತ್ತದ ಬಳಿ ವಿದ್ಯಾರ್ಥಿನಿಯರು 'ಹಚ್ಚೇವು ಕನ್ನಡ ದೀಪ' ಹಾಡಿಗೆ ಮನೋಜ್ಞವಾಗಿ ನೃತ್ಯ ಮಾಡಿ ಚಪ್ಪಾಳೆಗಿಟ್ಟಿಸಿದರು.

ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ ಪ್ರಾಂಶುಪಾಲ ಡಾ.ಗಜಾನನ ಹೆಗಡೆ, ಡಾ. ಕೆರೋಲಿನ್ ಇನ್ನಿತರರು ಉಪಸ್ಥಿತರಿದ್ದರು.

## ಡಾ.ತ್ರಿನೇತ್ರ ಮಹಾಂತ ಶಿವಯೋಗಿ ಶ್ರೀ ಉದ್ಘಾಟನೆ

# ಪತ್ರಕರ್ತರಿಗೆ ಆರೋಗ್ಯ ತಪಾಸಣೆ

■ ವಿಜಯವಾಣಿ ಸುದ್ದಿಜಾಲ ಮೈಸೂರು

ರಾಷ್ಟ್ರೀಯ ಆಯುರ್ವೇದ ದಿನಾಚರಣೆ ಅಂಗವಾಗಿ ಪತ್ರಕರ್ತರಿಗೆ ಹಾಗೂ ಅವರ ಕುಟುಂಬದವರಿಗೆ ಆರೋಗ್ಯ ತಪಾಸಣಾ ಶಿಬಿರ ನಗರದ ಪತ್ರಕರ್ತರ ಭವನದಲ್ಲಿ ಶುಕ್ರವಾರ ನಡೆಯಿತು.

ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರ, ನಾರಾಯಣ ಹೃದಯಾಲಯ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ, ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ ಸಹಯೋಗದಲ್ಲಿ ನಡೆದ ಶಿಬಿರದಲ್ಲಿ ಮೂಳೆ ಸಾಂದ್ರತೆ, ಮಧುಮೇಹ, ರಕ್ತದೊತ್ತಡ, ಹೃದಯ ತಪಾಸಣೆ ಸೇರಿದಂತೆ ಇತರ ಸಾಮಾನ್ಯ ಕಾಯಿಲೆಗಳಿಗೆ ತಜ್ಞ ವೈದ್ಯರು ತಪಾಸಣೆ ನಡೆಸಿ ಉಚಿತವಾಗಿ ಔಷಧ ವಿತರಿಸಿದರು.

ಕಾರ್ಯಕ್ರಮ ಉದ್ಘಾಟಿಸಿದ ಬೇಬಿಮಠದ ಪೀಠಾಧ್ಯಕ್ಷ ಡಾ.ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ ಮಾತನಾಡಿ, ಪತ್ರಕರ್ತರಿಗೆ ಆರೋಗ್ಯ ತಪಾಸಣಾ ಶಿಬಿರ ಅಗತ್ಯವಿದೆ. ಮಾಧ್ಯಮ ದೇಶದ ಪ್ರಮುಖ ಅಂಗ. ಪತ್ರಕರ್ತರು ಆರೋಗ್ಯವಾಗಿದ್ದರೆ ಈ ಕ್ಷೇತ್ರ ಮತ್ತಷ್ಟು ಅಭಿವೃದ್ಧಿ ಆಗಲಿದೆ ಎಂದರು.

ಶಾಸಕ ಎಸ್.ಎ.ರಾಮದಾಸ್ ಮಾತನಾಡಿ, ಆಯುರ್ವೇದ ಅತ್ಯಂತ ಪರಿಣಾಮಕಾರಿ ಚಿಕಿತ್ಸೆ. ಇದರಲ್ಲಿ ಯಾವುದೇ ಅಡ್ಡ ಪರಿಣಾಮಗಳು ಇಲ್ಲ. ಇತ್ತೀಚಿನ ಸಂಶೋಧನೆಗಳಿಂದ ಕ್ಯಾನ್ಸರ್



ವಿಜಯವಾಣಿ ಚಿತ್ರ

ಪತ್ರಕರ್ತರ ಭವನದಲ್ಲಿ ಪತ್ರಕರ್ತರಿಗೆ ಆಯೋಜಿಸಿದ್ದ ಆರೋಗ್ಯ ತಪಾಸಣಾ ಶಿಬಿರವನ್ನು ಡಾ.ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ ಉದ್ಘಾಟಿಸಿದರು.

ಸೇರಿದಂತೆ ಎಲ್ಲ ಕಾಯಿಲೆಗಳಿಗೂ ತ್ವರಿತವಾಗಿ ಗುಣಮುಖವಾಗುವ ಚಿಕಿತ್ಸೆ ಈ ಪದ್ಧತಿಯಲ್ಲಿ ಇದೆ ಎನ್ನುವುದು ರುಜುವಾತಾಗಿದೆ ಎಂದರು.

ಯೋಗ ಗುರು ಪ್ರಕಾಶ್‌ಯೋಗಿ, ಮಾಜಿ ಸಚಿವ ಸಿ.ಎಚ್. ವಿಜಯಶಂಕರ್, ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಸಿ.ಕೆ. ಮಹೇಂದ್ರ, ಪ್ರಧಾನ ಕಾರ್ಯದರ್ಶಿ ಕೆ.ಜೆ.ಲೋಕೇಶ್ ಬಾಬು ಇತರರು ಈ ಸಂದರ್ಭದಲ್ಲಿದ್ದರು.

---

## 3ನೇ ರಾಷ್ಟ್ರೀಯ ಆಯುರ್ವೇದ ದಿನಾಚರಣೆ

# ಔಷಧೀಯ ಸಂಶೋಧನಾ ಕೇಂದ್ರ ಸ್ಥಾಪನೆಗೆ ಚಿಂತನೆ

ಬೆಂಗಳೂರು, ನ.5: ಪರಂಪರೆಯ ಸಸಿಗಳಲ್ಲಿ ಔಷಧಿ ಗುಣ ಕಂಡು ಹಿಡಿಯುವ ಉದ್ದೇಶದಿಂದ ಬೆಂಗಳೂರಿನ ಸರಕಾರಿ ಆಯುರ್ವೇದ ವೈದ್ಯಕೀಯ ಮಹಾ ವಿದ್ಯಾಲಯದ ಆವರಣದೊಳಗೆ 'ಔಷಧೀಯ ಸಂಶೋಧನಾ ಕೇಂದ್ರ' ಸ್ಥಾಪಿಸಲು ಚಿಂತನೆ ನಡೆಸಲಾಗಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಎಸ್.ಶಿವಾನಂದ ಪಾಟೀಲ್ ತಿಳಿಸಿದ್ದಾರೆ.

ಸೋಮವಾರ ನಗರದ ಧನ್ವಂತರಿ ರಸ್ತೆಯ ಆಯುರ್ವೇದ ವೈದ್ಯಕೀಯ ಮಹಾ ವಿದ್ಯಾಲಯದ ಆವರಣದಲ್ಲಿ ಆಯುಷ್ ಇಲಾಖೆ ಆಯೋಜಿಸಿದ್ದ 3ನೇ ರಾಷ್ಟ್ರೀಯ ಆಯುರ್ವೇದ ದಿನಾಚರಣೆ ಹಾಗೂ ವಿಶೇಷ ಅಂಚೆ ಲಕೋಟೆ ಬಿಡುಗಡೆ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಸನಾತನ ಔಷಧಿ ಸಸ್ಯಗಳನ್ನು ರಕ್ಷಣೆ ಮಾಡುವಲ್ಲಿ ಬೆಂಗಳೂರಿನ ಸರಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಅಮೂಲ್ಯ ಕೊಡುಗೆ ನೀಡಿದೆ. ಹಾಗಾಗಿ ಇಲ್ಲಿನ ಆವರಣದಲ್ಲಿ ಔಷಧೀಯ ಸಂಶೋಧನಾ ಕೇಂದ್ರ ಸ್ಥಾಪಿಸಿದರೆ ಮತ್ತಷ್ಟು ಸಸ್ಯಗಳಲ್ಲಿನ ಔಷಧಿ ಗುಣ ಕಂಡು ಹಿಡಿಯಬಹುದು. ಈ ಸಂಬಂಧ ಮಹಾ ವಿದ್ಯಾಲಯವೂ ಕ್ರಿಯಾ ಯೋಜನೆ ಸಲ್ಲಿಸಿದರೆ



ರಾಜ್ಯ ಸರಕಾರ ಅಗತ್ಯ ಕ್ರಮ ಕೈಗೊಳ್ಳಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಒಂದು ಕಡೆ ವಿಜ್ಞಾನ ಮತ್ತೊಂದೆಡೆ ಆಯುರ್ವೇದ ಇದೆ. ವಿಜ್ಞಾನ ಅಲೋಪತಿ ಒಪ್ಪಿಕೊಂಡರೆ ಜನರು ಆಯುರ್ವೇದ ಅಪ್ಪಿಕೊಳ್ಳಬೇಕು ಎನ್ನುವ ಹಂಬಲ ಇದೆ. ಅದೂ ಅಲ್ಲದೆ ವಿಜ್ಞಾನ ಮತ್ತು ಆಯುರ್ವೇದಕ್ಕೆ ವ್ಯತ್ಯಾಸ ಇದ್ದು ಜನ ತ್ವರಿತವಾಗಿ ರೋಗ ನಿವಾರಣೆ ಬಯಸುತ್ತಾರೆ.

ಇನ್ನು ಕೆಲವರು ಪ್ರಕೃತಿ ರೀತಿ ರೋಗ ಗುಣಪಡಿಸಿಕೊಳ್ಳುವ ನಿರೀಕ್ಷೆ ಇಟ್ಟುಕೊಳ್ಳುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ಆಯುರ್ವೇದಕ್ಕೆ ಮರುಜೀವ ನೀಡುವ ಪ್ರಾಮಾಣಿಕ ಪ್ರಯತ್ನವನ್ನು ಬೆಂಗಳೂರಿನ ಸರಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮಾಡುತ್ತಿದೆ ಎಂದು ಪ್ರಶಂಸಿಸಿದರು.

> ಚೀನಾ ದೇಶದಲ್ಲಿ ಮೊದಲು ತಮ್ಮ ವಿದ್ಯೆಯನ್ನೇ ಪ್ರಯತ್ನಿಸಿ ನಂತರ ಅಲೋಪತಿಗೆ ಹೋಗುತ್ತಾರೆ. ಈ ಮಾದರಿಯನ್ನೇ ಅನುಸರಿಸಿ ನಾವು ಕೂಡಾ ಮೊದಲು ಆಯುರ್ವೇದ ಬಳಸಲು ಪ್ರಯತ್ನಿಸೋಣ.
>
> । ಎಸ್.ಶಿವಾನಂದ ಪಾಟೀಲ್, ಆರೋಗ್ಯ ಸಚಿವ

> ಆಯುರ್ವೇದವೂ ದೇಶದ ಸಂಸ್ಕೃತಿ, ಜೀವನ ಶೈಲಿ ಆಗಿದೆ. ಇಂದು ವಿದೇಶಿಗರು ಬಹುಸಂಖ್ಯೆಯಲ್ಲಿ ಆಯುರ್ವೇದ ಚಿಕಿತ್ಸೆಗಾಗಿ ಭಾರತಕ್ಕೆ ಬರುತ್ತಾರೆ. ಅದರಲ್ಲೂ ಕೇರಳದಲ್ಲಿ ಇಂದಿಗೂ ಆಯುರ್ವೇದ ಆದಾಯದ ಮೂಲವಾಗಿದೆ. ಹಾಗಾಗಿ ನಮ್ಮ ರಾಜ್ಯದಲ್ಲೂ ಆಯುರ್ವೇದ ಚಿಕಿತ್ಸೆ ವ್ಯಾಪ್ತಿಯನ್ನು ಹೆಚ್ಚಿಸಬೇಕು.
>
> । ದಿನೇಶ್ ಗುಂಡೂರಾವ್, ಶಾಸಕ

**5 ರೂ.ಗೆ ಚಿಕಿತ್ಸೆ:** ಬರೀ 5, 10 ರೂಪಾಯಿಯಲ್ಲೇ ಕಡು ಬಡವರಿಗೆ ಸರಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಗುಣಮಟ್ಟದ ಚಿಕಿತ್ಸೆ ನೀಡುತ್ತಿದ್ದು, ಹತ್ತು ಹಲವು ಗಂಭೀರ ರೋಗಗಳು ಗುಣಪಡಿಸಿದ ಉದಾಹರಣೆ ಇದೆ. ಇಂತಹ ಸೇವೆ ಎಲ್ಲಿಯೂ ದೊರೆಯುತ್ತಿಲ್ಲ ಎಂದು ಶಿವಾನಂದ ಪಾಟೀಲ್ ತಿಳಿಸಿದರು.

### ಶಿವಾನಂದ ಪಾಟೀಲ್

> ಯಾವುದೇ ರೀತಿಯ ದುಷ್ಪರಿಣಾಮವಿಲ್ಲದ ಆಯುರ್ವೇದ ಚಿಕಿತ್ಸೆ ಪಡೆಯಲು ಜನತೆ ಮುಂದೆ ಬರಬೇಕು. ಆಯುರ್ವೇದ ಔಷಧಿ ಸಸ್ಯಗಳ ಬಗ್ಗೆ ಎಲ್ಲರೂ ಅರಿಯಬೇಕು. ಇವುಗಳನ್ನು ಉಳಿಸಿ-ಬಳಿಸಲು ಪ್ರತಿಯೊಬ್ಬರು ಕೈಜೋಡಿಸಬೇಕು.
>
> । ಮೀನಾಕ್ಷಿ ನೇಗಿ, ಆಯುಕ್ತೆ, ಆಯುಷ್ ಇಲಾಖೆ

ಪೋಸ್ಟ್ ಮಾಸ್ಟರ್ ಜನರಲ್(ಬೆಂಗಳೂರು) ಕರ್ನಲ್ ಅರವಿಂದ್ ವರ್ಮಾ ಮಾತನಾಡಿದರು. ಆಯುಷ್ ಇಲಾಖೆ ಆಯುಕ್ತೆ ಮೀನಾಕ್ಷಿ ನೇಗಿ ಸ್ವಾಗತಿಸಿದರು. ಸರಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಎಸ್. ಅಹಲ್ಯಾ ಸೇರಿದಂತೆ ಪ್ರಮುಖರು ಪಾಲ್ಗೊಂಡಿದ್ದರು.

# ವೈದ್ಯ, ರೋಗಿಗಳ ಸಂಬಂಧ ಗಟ್ಟಿಗೊಳ್ಳಲಿ



ಹಾಸನ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಮಹಾವಿದ್ಯಾಲಯ ಆವರಣದಲ್ಲಿ ನಡೆದ ಆಹಾರ ಮೇಳದಲ್ಲಿ ರಾಜ್ಯ ಸರಕಾರ ಆಯುಷ್ ಇಲಾಖೆಯ ಆಯುಕ್ತೆ ಮೀನಾಕ್ಷಿ ನೇಗಿ ಉದ್ಘಾಟಿಸಿ ನಂತರ ತಿಂಡಿಯ ರುಚಿಯನ್ನು ಪರಿಶೀಲಿಸಿದರು.

» ನಮ್ಮ ಮೊದಲ ಪುಟದಿಂದ

ಪಾರಂಪರಿಕ ಜ್ಞಾನದ ರಾಷ್ಟ್ರೀಯ ಪರಿಷತ್ತಿನ ಮುಖ್ಯಸ್ಥ ಡಾ. ಡ್ಯಾನಿಸ್ಟರ್ ಪೆರೇರಾ ಮಾತನಾಡಿ, ವಿಶ್ವದ ವಿವಿಧ ರಾಷ್ಟ್ರಗಳಲ್ಲಿರುವ ಆಯುರ್ವೇದ ಕಾಲೇಜುಗಳ ಪೈಕಿ ಹಾಸನದ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಮಹಾವಿದ್ಯಾಲಯ ಅತ್ಯಂತ ಪ್ರತಿಷ್ಠಿತ ವಿದ್ಯಾಸಂಸ್ಥೆಯಾಗಿದೆ. ಧಾರ್ಮಿಕ ಪರಂಪರೆಯನ್ನು ಅಳವಡಿಸಿಕೊಂಡು ಆಯುರ್ವೇದ ಶಿಕ್ಷಣ ನೀಡುತ್ತಿರುವ ಏಕೈಕ ಶಿಕ್ಷಣ ಸಂಸ್ಥೆ ಇದಾಗಿದೆ. ವೈದ್ಯರಿಗೆ ಸಂಸ್ಕಾರ, ಮಾನವೀಯ ಗುಣಗಳು ಅತ್ಯಂತ ಅವಶ್ಯಕವಾಗಿದೆ. ಆಯುರ್ವೇದ ಹಲವು ಭಾಗಗಳಲ್ಲಿ ನಾವು ಪ್ರವಾಸ ಮಾಡಿದ್ದು, ಎಲ್ಲಾ ರಾಷ್ಟ್ರಗಳು ಆಯುರ್ವೇಧ ಶಿಕ್ಷಣಕ್ಕೆ ಆದ್ಯತೆ ನೀಡುತ್ತಿದೆ. ಇದಕ್ಕಾಗಿ ವಿವಿಧ ರಾಷ್ಟ್ರಗಳ ವೈದ್ಯಕೀಯ ಸಂಸ್ಥೆಗಳು ಆಯುರ್ವೇದ ಚಿಕಿತ್ಸಾ ಘಟಕಗಳನ್ನು ಆರಂಭಿಸಲು ಉತ್ಸುಕರಾಗುತ್ತಿದ್ದಾರೆ. ಆಯು ರ್ವೇದ ಚಿಕಿತ್ಸೆಯ ಮೂಲ ಭಾರತ ದೇಶ, ಹಾಗಾಗಿ ಇಲ್ಲಿ ಆಯುರ್ವೇದ ಶಿಕ್ಷಣ ಪಡೆದು ವೈದ್ಯಕೀಯ ವೃತ್ತಿಗೆ ಬರುವ ಯುವ ವೈದ್ಯರಿಗೆ ಹೊರ ರಾಷ್ಟ್ರಗಳಲ್ಲಿ ಅನೇಕ ಬೇಡಿಕೆಗಳು ಇವೆ. ಹಾಗಾಗಿ ಆಯುರ್ವೇದ ಶಿಕ್ಷಣ ಪಡೆಯುವ ವೇಳೆ ಹೆಚ್ಚು ಆಸಕ್ತಿಯಿಂದ ಶಿಕ್ಷಣ ಪಡೆಯುವ ಮೂಲಕ ಉತ್ತಮ ವೈದ್ಯರಾಗಬೇಕು ಎಂದರು.

ಬೆಳಗ್ಗೆ 5.30ರಿಂದ 8.30 ರ ವರೆಗೆ ಧನ್ವಂತರಿ ಹೋಮ ನಡೆಯಿತು. ಅಲ್ಲದೇ, ಕಾಲೇಜಿನ ವಿವಿಧ ವಿದ್ಯಾರ್ಥಿಗಳು ವಿವಿಧ ಮಾದರಿಯ ವೇಷಭೂಷಣ ಧರಿಸಿ ಗಮನ ಸಳೆದರು. ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇಧ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ. ಪ್ರಸನ್ ಎನ್ ರಾವ್ ಅಧ್ಯಕ್ಷತೆ ವಹಿಸಿದ್ದರು, ಆಯುಷ್ ಇಲಾಖೆ ಅಧಿಕಾರಿಗಳಾದ ಷಣೈ, ಪುಷ್ಪ ಹಾಗೂ ಇತರರು ಹಾಜರಿದ್ದರು.

**ಆಕರ್ಷಣೆಗೊಂಡ ಆಹಾರ ಮೇಳ:** ಕಾರ್ಯಕ್ರಮದ ಅಂಗವಾಗಿ ಕಾಲೇಜಿನ ಯುವಕರು ಹಮ್ಮಿಕೊಂಡಿದ್ದ ಆಹಾರ ಮೇಳ ಎಲ್ಲರ ಆಕರ್ಷಣೆಯಾಗಿತ್ತು. ಕಾಲೇಜಿನ ಯುವಕರ 23 ತಂಡಗಳಲ್ಲಿ ಆಯುರ್ವೇದ ವಿದ್ಯಾರ್ಥಿಗಳು, ವೈದ್ಯರು ಹಾಗೂ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸದಸ್ಯರು ತಯಾರಿಸಿದ್ದ ವಿಶೇಷ ದೇಸಿ ಖಾದ್ಯಗಳು ಸ್ಪರ್ಧಾತ್ಮಕ ಅಗ್ಗ ಬೆಲೆಯಲ್ಲಿ ಮಾರಾಟವಾಯಿತು. ವಿವಿಧ ಮಾದರಿಯ ಆಹಾರ ಸೇವಿಸಿದ ಜನರು ಬಾಯಿ ಚಪ್ಪರಿಸುವಂತೆ ವಿವಿಧ ಆಹಾರಗಳನ್ನು ತಿಂದು ಮನಸೋತರು. ಕೇರಳ ಸೇರಿದಂತೆ ವಿವಿಧ ರಾಜ್ಯದ ವಿದ್ಯಾರ್ಥಿಗಳು ತಮ್ಮ ರಾಜ್ಯದ ಖಾದ್ಯಗಳನ್ನು ಇಲ್ಲಿ ಮಾರಾಟ ಮಾಡಲಾಯಿತು. ಆರೋಗ್ಯಕ್ಕೆ ಪೂರಕವಾಗಬಲ್ಲ ಆಹಾರಗಳ ಮಾಹಿತಿಯೂ ವೈದ್ಯರಿಂದ ದೊರೆಯಿತು, ಈ ಮೇಳದಲ್ಲಿ ಆರೋಗ್ಯಾಕಾಂಕ್ಷಿಗಳು ಭಾಗವಹಿಸಿ, ರುಚಿ ಸವಿದರು. ಆರೋಗ್ಯಕರ ಆಹಾರ ಪದ್ಧತಿಯನ್ನು ತಮ್ಮ ದೈನಂದಿನ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಇಲ್ಲಿನ ವೈದ್ಯ ವಿದ್ಯಾರ್ಥಿಗಳು ಬಂದವರಿಗೆ ಅರಿವು ಮೂಡಿಸಿದರು.

# ಆಯುರ್ ದಿನ: ಮಕ್ಕಳಿಗೆ ಕ್ವಿಜ್

■ **ವಿಕ ಸುದ್ದಿಲೋಕ** ಮೈಸೂರು

ಸರಕಾರಿ ಪ್ರೌಢಶಾಲೆ ಹೂಟಗಳ್ಳಿಯಲ್ಲಿ ರಾಷ್ಟ್ರೀಯ ಆಯುರ್ವೇದ ದಿನಾಚರಣೆ ನಡೆಯಿತು.

ರಾಷ್ಟ್ರೀಯ ಆಯುರ್ವೇದ ದಿನಾ ಚರಣೆಯ ಪ್ರಯುಕ್ತ ಸರಕಾರಿ ಆಯುರ್ವೇದ ಸಂಶೋಧನಾ ಕೇಂದ್ರದ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮ ದಲ್ಲಿ ಮಕ್ಕಳಿಗೆ ಆಯುರ್ವೇದ ಜಾಗೃತಿ ಮೂಡಿಸಲಾಯಿತು. ಜತೆಗೆ ಆಯುರ್ವೇದ ಔಷಧಯಲ್ಲಿ ಬಳಕೆ ಮಾಡಲಾಗುವ ಗಿಡಮೂಲಿಕೆಗಳ ಪ್ರಾತ್ಯಕ್ಷಿಕೆ ನೀಡಲಾಯಿತು.

ಕಾರ್ಯಕ್ರಮದ ಕೊನೆಯಲ್ಲಿ ವಿದ್ಯಾರ್ಥಿಗಳಲ್ಲಿ ಆಯುರ್ವೇದ ಆಸಕ್ತಿ ಹೆಚ್ಚಿಸಲು ಆಯುರ್ ಕ್ವಿಜ್ ಹಮ್ಮಿಕೊಳ್ಳಲಾಯಿತು. ಎ ವಿಭಾಗದಲ್ಲಿ ಎಂ.ಎಂ.ನೇತ್ರಾವತಿ (ಪ್ರ) ಎಸ್.ಪವಿತ್ರಾ (ದ್ವಿ) ಎನ್.ಗಿರಿಜಾ (ತೃ) ಬಿ ಗುಂಪಿನಲ್ಲಿ ಬಿ.ಅಮೃತಾ (ಪ್ರ) ಸಿ.ದಿವ್ಯಾ (ದ್ವಿ) ೀಯ, ವಿ.ಸೃಷ್ಟಿ ತೃತೀಯ ಬಹುಮಾನ ಗಳಿಸಿದ್ದಾರೆ.

ಉಳಿದಂತೆ ಕಿಶೋರ್, ಮಾದೇಶ, ಬಿ.ಪವಿತ್ರಾ, ವಿಜಯಲಕ್ಷ್ಮೀ, ರಶ್ಮಿ,ಎಸ್.ದೀಪಾ, ಎಂ.ಎಸ್.ತನುಜಾ, ಕೆ.ಎನ್.ಸಂಜನಾ, ಕೆ.ಐಶ್ವರ್ಯ, ರಕ್ಷಿತಾ, ಎಂ. ಶಿವಕುಮಾರ್ ಅವರಿಗೆ ಸಮಾಧಾನಕರ ಬಹುಮಾನ ನೀಡಲಾಯಿತು.ಸರಕಾರಿ ಆಯುರ್ವೇದ ಸಂಶೋಧನಾ ಕೇಂದ್ರದ ಸಹಾಯಕ ನಿರ್ದೇಶಕ ಡಾ. ಲಕ್ಷ್ಮೀನಾರಾಯಣ ಶೆಣೈ, ಡಾ.ಮಂಜುಪ್ರಸಾದ್, ಶಾಲೆಯ ಮುಖ್ಯಶಿಕ್ಷಕಿ ಸಂಗೀತಾ ಮತ್ತು ಬೋಧಕ ವೃಂದ,ಬೋಧಕೇತರ ವೃಂದ ಮತ್ತು ವಿದ್ಯಾರ್ಥಿ, ವಿದ್ಯಾರ್ಥಿನಿಯರು ಭಾಗವಹಿಸಿದ್ದರು.



**ಆಯುರ್ ದಿನಾಚರಣೆ ಅಂಗವಾಗಿ ಹೂಟಗಳ್ಳಿ ಪ್ರೌಢಶಾಲೆಯಲ್ಲಿ ನಡೆದ ಆಯುರ್ ಕ್ವಿಜ್‌ನಲ್ಲಿ ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.**

# ವೈದ್ಯ, ರೋಗಿಗಳ ಸಂಬಂಧ ಗಟ್ಟಿಗೊಳ್ಳಲಿ

## ಆಹಾರ ಮೇಳದಲ್ಲಿ ಆಯುಷ್ ಇಲಾಖೆ ಆಯುಕ್ತೆ ಮೀನಾಕ್ಷಿ ನೇಗಿ

■ **ವಿಕ ಸುದ್ದಿಲೋಕ** ಹಾಸನ

ಗುರು ಪರಂಪರೆ, ಧಾರ್ಮಿಕ ಭಾವನೆ ಹಾಗೂ ಮಾನವೀಯ ಮೌಲ್ಯ ಗುಣಗಳನ್ನು ಯುವ ವೈದ್ಯರು ಮೈಗೂಡಿಸಿಕೊಂಡರೆ, ರೋಗಿಗ ಳೊಂದಿಗಿನ ಅವರ ಸಂಬಂಧ ಉತ್ತಮಗೊಳ್ಳುತ್ತದೆ ಎಂದು ರಾಜ್ಯ ಸರಕಾರ ಆಯುಷ್ ಇಲಾಖೆ ಆಯುಕ್ತೆ ಮೀನಾಕ್ಷಿ ನೇಗಿ ಹೇಳಿದರು.

ನಗರದ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಮಹಾವಿದ್ಯಾಲಯದ ಆವರಣದಲ್ಲಿ ಮಂಗಳವಾರ ನಡೆದ ಶಿಷ್ಯೋಪನಯನ ಸಂಸ್ಕಾರ ಹಾಗೂ ಆಹಾರ ಮೇಳದಲ್ಲಿ ಮಾತನಾಡಿದರು. ವೈದ್ಯರು ಆಧುನಿಕ ತಂತ್ರಜ್ಞಾನದ ವಿಷಯಗಳನ್ನು ಅಧ್ಯಯನ ಮಾಡಿ ವೈದ್ಯಕೀಯ ಕ್ಷೇತ್ರಕ್ಕೆ ಬರುತ್ತಾರೆ. ಅವರಿಗೆ ಧಾರ್ಮಿಕ, ಸಾಮಾಜಿಕ, ಮಾನವೀಯ ಮೌಲ್ಯದ ಗುಣಗಳು ಕಡಿಮೆ ಇರುತ್ತದೆ. ನಮ್ಮ ಪರಂಪರೆಯ ಬಗ್ಗೆ ಜ್ಞಾನ ಇಲ್ಲದೆ ಇರುವುದರಿಂದ ಇಂದು ವೈದ್ಯ ಹಾಗೂ ರೋಗಿಗಳ ನಡುವಿನ ಅಂತರ ಹೆಚ್ಚಾಗಲು ಕಾರಣವಾಗಿದೆ. ಧಾರ್ಮಿಕ ಭಾವನೆಯನ್ನು ಶಿಕ್ಷಣದ ಅವಧಿಯಲ್ಲಿ ಮೈಗೂಡಿಸಿಕೊಳ್ಳುವು ದರಿಂದ ಶರಣಾಗತಿಯ ಭಾವ ಬರುತ್ತದೆ. ಗುರು ಭಕ್ತಿ ಹೆಚ್ಚಾಗಲು ಸಾಧ್ಯವಾಗುತ್ತದೆ ಎಂದರು.

ಇಂತಹ ಗುಣಗಳಿಂದ ಮಾನಸಿಕವಾಗಿ ರೋಗಿಗಳನ್ನು ಚಿಕಿತ್ಸೆ ನೀಡುವ ರೀತಿ ಉತ್ತಮವಾಗಿರುತ್ತದೆ. ಆಯುರ್ವೇದ ಚಿಕಿತ್ಸಾ ಪದ್ಧತಿಯು ವಿಶ್ವದ ಎಲ್ಲೆಡೆ ಇಂದು ಮಹತ್ವ ಪಡೆದುಕೊಳ್ಳುತ್ತಿದ್ದು, ಆಯುರ್ವೇದ ಕ್ಷೇತ್ರದಲ್ಲಿ ಕೆಲಸ ಮಾಡಲು ಬರುವ ಯುವ ವೈದ್ಯರಿಗೆ ಮುಂದಿನ ದಿನಗಳಲ್ಲಿ ಸಾಕಷ್ಟು ಅವಕಾಶವಿದೆ. ದೇಶದಲ್ಲಿದ್ದ ಕೆಲವು ಮಾರಣಾಂತಿಕ ಕಾಯಿಲೆಗಳನ್ನು ನಮ್ಮ ಭಾರತೀಯ ವೈದ್ಯರು ಕಡಿವಾಣಕ್ಕೆ ತಂದಿದ್ದಾರೆ. ಆದರೂ ಇನ್ನು ಕೆಲವು ಭಾಗಗಳಲ್ಲಿ ಒಂದು ಎರಡು ಪ್ರಕರಣಗಳು ಬೆಳಕಿಗೆ ಬರುತ್ತಿದೆ. ಹಾಗಾಗಿ ಯುವ ವೈದ್ಯರು ಸೇವಾ ಮನೋಭಾವನೆಯಿಂದ ದೇಶದ ಹಿತಕ್ಕಾಗಿ ದೇಶವನ್ನು ರೋಗ ಮುಕ್ತ ಮಾಡುವ ನಿಟ್ಟಿನಲ್ಲಿ ಕೆಲಸ ಮಾಡಿದರೆ ಮಾದರಿ ವೈದ್ಯರಾಗಲು ಸಾಧ್ಯವಾಗಿದೆ ಎಂದು ಹೇಳಿದರು.

ಮೈಸೂರಿನ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯ ಆಯುರ್ವೇದ ವೈದ್ಯ ಡಾ.ಬಿ. ಗುರುಬಸವರಾಜ್ ಮಾತನಾಡಿ, ಇಂದಿನ ಯುವಕರು ಗುರುಗಳಿಗೆ ಗೌರವ ನೀಡುವುದನ್ನು ಮರೆತ್ತಿದ್ದಾರೆ. ಗುರು ಶಿಷ್ಯರ ಸಂಬಂಧ ಹದಗೆಡುತ್ತಿದ್ದು, ವೈದ್ಯ ಹಾಗೂ ರೋಗಿಗಳ ನಡುವಿನ ಸಂಬಂಧವೂ ಹದಗೆಟ್ಟಿದೆ. ತಂತ್ರಜ್ಞಾನ ಇಂದು ಮುಂದುವರೆದಿದೆ. ಆದರೆ, ನಾವುಗಳು ನಮ್ಮ ಪರಂಪರೆಯನ್ನು ಮರೆಯಲು ಸಾಧ್ಯವಾಗುವುದಿಲ್ಲ, ಯುವಕರು ಧಾರ್ಮಿಕ ಹಿನ್ನೆಲೆಯಲ್ಲಿ ಅಧ್ಯಯನ ಮಾಡುವ ಮೂಲಕ ಸಮಾಜದಲ್ಲಿ ಕೆಲಸ ಮಾಡಬೇಕಾದ ಅನಿವಾರ್ಯತೆ ಇದೆ. ಶೇ.100 ರಷ್ಟು ಕಾಯಿಲೆಗಳಲ್ಲಿ ಶೇ.90 ರಷ್ಟು ಕಾಯಿಲೆಗಳನ್ನು ಸಂಪೂರ್ಣವಾಗಿ ವಾಸಿ ಮಾಡಲು ಸಾಧ್ಯವಾಗದ ಸ್ಥಿತಿ ನಿರ್ಮಾಣವಾಗಿದೆ. ನಮ್ಮ ಆಯುರ್ವೇದ ಚಿಕಿತ್ಸಾ ಪದ್ಧತಿಯಿಂದ ಮಾತ್ರ ಕಾಯಿಲೆಯನ್ನು ಸಂಪೂರ್ಣವಾಗಿ ವಾಸಿ ಮಾಡಬಹುದಾಗಿದ್ದು, ಇದರ ಬಗ್ಗೆ ಹೆಚ್ಚು ಹೆಚ್ಚು ಸಂಶೋಧನೆಗಳು ಆಗಬೇಕಾಗಿದೆ. ವಿಶ್ವದೆಲ್ಲೆಡೆ ಆಯುರ್ವೇದ ಚಿಕಿತ್ಸೆ ಮಹತ್ವ ಪಡೆದುಕೊಳ್ಳುತ್ತಿದ್ದು, ಈ ಕ್ಷೇತ್ರದಲ್ಲಿ ಹೆಚ್ಚು ಹೆಚ್ಚು ಸಂಶೋಧನೆ ಆಗಬೇಕು ಎಂದು ತಿಳಿಸಿದರು.

pII



**ನಗರದ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಮಹಾವಿದ್ಯಾಲಯ ಆವರಣದಲ್ಲಿ ಶಿಷ್ಯೋಪನಯನ ಸಂಸ್ಕಾರ ಕಾರ್ಯಕ್ರಮದ ಅಂಗವಾಗಿ ವಿದ್ಯಾರ್ಥಿಗಳು ಸಾಂಪ್ರದಾಯಿಕ ವೇಷಭೂಷಣ ಧರಿಸಿ ಜಾಥಾ ನಡೆಸಿದರು.**

# ಎಸ್.ಹೊಸಕೋಟೆಯಲ್ಲಿ ಆರೋಗ್ಯ ತಪಾಸಣೆ



ಎಸ್.ಹೊಸಕೋಟೆ ಗ್ರಾಮದಲ್ಲಿ ಉಚಿತ ಆರೋಗ್ಯ ತಪಾಸಣೆ ಶಿಬಿರ ಹಾಗೂ ಮಧುಮೇಹ ಜಾಗೃತಿ ಕಾರ್ಯಕ್ರಮ ನಡೆಯಿತು.

ಸುತ್ತೂರು, ನ. 14– ನಂಜನಗೂಡು ತಾಲೂಕು ಎಸ್.ಹೊಸಕೋಟೆ ಗ್ರಾಮದ ಶ್ರೀ ಗುರುಮಲ್ಲೇಶ್ವರ ಮಠದ ಆವರಣದಲ್ಲಿ ಗುರುಸ್ವಾಮಿಯವರ 40ನೇ ವರ್ಷದ ಜನ್ಮದಿನಾಚರಣೆ ಪ್ರಯುಕ್ತ ಹಮ್ಮಿಕೊಂಡಿದ್ದ ಉಚಿತ ಆರೋಗ್ಯ ತಪಾಸಣೆ ಶಿಬಿರ ಹಾಗೂ ಮಧುಮೇಹ ಜಾಗೃತಿ ಕಾರ್ಯಕ್ರಮವನ್ನು ದೇವಲಾಪುರ ಮಠಾಧೀಶ ಜಡೇ ಸ್ವಾಮೀಜಿ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಆಧುನಿಕ ಜೀವನ ಶೈಲಿಯಿಂದಾಗಿ ಜನರ ಆರೋಗ್ಯ ಹದಗೆಡುತ್ತಿದೆ. ಹಿಂದಿನವರ ಆರೋಗ್ಯವನ್ನು ಗಮನಿಸಿದಾಗ ಅವರ ಜೀವನ ಶೈಲಿ ಮತ್ತು ಆಹಾರ ಪದ್ಧತಿಯ ಮಹತ್ವ ತಿಳಿಯುತ್ತದೆ. ಹಾಗಾಗಿ ಇಂದಿನ ಜನತೆ ನಮ್ಮ ಹಿಂದಿನವರ ಆಹಾರ ಪದ್ಧತಿ ಅಳವಡಿಸಿಕೊಂಡು ಉತ್ತಮ ಆರೋಗ್ಯ ಹೊಂದಬೇಕು ಎಂದು ಕಿವಿಮಾತು ಹೇಳಿದರು.

ಆರೋಗ್ಯ ಇಲಾಖೆಯ ಡಾ.ಸುಮಾ ಮಾತನಾಡಿದರು. ಶ್ರೀ ಮಠದ ಗುರುಸ್ವಾಮೀಜಿ, ಕಾರ್ಯದರ್ಶಿ ಪ್ರಭುಸ್ವಾಮಿ, ಗ್ರಾಮದ ಮುಖಂಡರಾದ ಸೋಮಪ್ಪ, ಗ್ರಾಪಂ ಸದಸ್ಯರಾದ ಮೂಡಹಳ್ಳಿ ರವಿ, ಮೈಸೂರಿನ ಆಯುರ್ವೇದ ಸಂಶೋಧನಾ ಕೇಂದ್ರದ ಸಹಾಯಕ ನಿರ್ದೇಶಕ ಡಾ. ಲಕ್ಷ್ಮೀನಾರಾಯಣ ಶೆಣೈ, ಜೆಎಸ್ಎಸ್ ಆಯುರ್ವೇದ ಕಾಲೇಜು ವೈದರಾದ ಡಾ. ಸೀತಾದೇವಿ, ಡಾ.ಮಂಜುನಾಥ್, ಡಾ. ಶಶಿಕಿರಣ್, ಡಾ. ವಿದ್ಯಾನಾರಾಯಣ್, ಡಾ. ಅಂಜನಾ, ಗ್ರಾಮದ ಸರ್ಕಾರಿ ಶಾಲಾ ಮುಖ್ಯ ಶಿಕ್ಷಕಿ ಹೆಚ್.ಎಂ.ಶೋಭಾ ಹಾಜರಿದ್ದರು.

# ಕಣಿಯನಹುಂಡಿಯಲ್ಲಿ ಉಚಿತ ತಪಾಸಣಾ ಶಿಬಿರ

■ ವಿಜಯವಾಣಿ ಸುದ್ದಿಜಾಲ ಮೈಸೂರು

ಆಯುರ್ವೇದ ದಿನಾಚರಣೆ ಅಂಗವಾಗಿ ತಾಲೂಕಿನ ಕಣಿಯನಹುಂಡಿಯಲ್ಲಿ ಉಚಿತ ತಪಾಸಣಾ ಶಿಬಿರ ಆಯೋಜಿಸಲಾಗಿತ್ತು.

» ಜಿಪಂ ಸಿಇಒ ಕೆ.ಜ್ಯೋತಿ ಉದ್ಘಾಟನೆ

ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರ, ಅರ್ಕಧಾಮದಿಂದ ಆಯೋಜಿಸಿದ್ದ ಶಿಬಿರಕ್ಕೆ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಜ್ಯೋತಿ ಚಾಲನೆ ನೀಡಿ ಮಾತನಾಡಿ, ಗ್ರಾಮೀಣ ಪ್ರದೇಶದ ಜನರು ನಿಯಮಿತವಾಗಿ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುವುದು ಅವಶ್ಯಕ. ನಮ್ಮ ಪ್ರಾಚೀನ ಪದ್ಧತಿಯಾದ ಆಯುರ್ವೇದದಲ್ಲಿ ಅನೇಕ ಉಪಯುಕ್ತ ಅಂಶಗಳಿದ್ದು, ಅವು ಜನರಿಗೆ ದೊರೆಯುವಂತಾಗಬೇಕು ಎಂದರು.

ಉದ್ಯಮಿ ಬಿ.ಆರ್.ಪೈ, ವೈದ್ಯರಾದ ಡಾ.ನಾಗೇಶ್, ಡಾ. ಮಧುಮತಿ, ಸ್ವಾತಂತ್ರ್ಯ ಹೋರಾಟಗಾರ ಎಂ.ಜಿ.ಕೃಷ್ಣಮೂರ್ತಿ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಶ್ರೀ ಶ್ರೀನಿವಾಸ ಅರ್ಕ ಅವರು ಆಶೀರ್ವಚನ ನೀಡಿದರು. ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರದ ಸಹಾಯಕ ನಿರ್ದೇಶಕ ಡಾ. ಲಕ್ಷ್ಮೀನಾರಾಯಣ ಶೆಣೈ, ಡಾ.ದೀಪಾ, ಡಾ.ಅಂಜನಾ, ಡಾ.ಪಲ್ಲವಿ, ಡಾ.ಸಂಗೀತಾ, ಡಾ.ರಿನ್ನಿ, ಡಾ. ಸುಪ್ರೀತಾ, ಡಾ. ಮಂಜುಪ್ರಸಾದ್ ಇತರರು ಹಾಜರಿದ್ದರು.

ವಿಜಯವಾಣಿ ಚಿತ್ರ



ಆಯುರ್ವೇದ ದಿನಾಚರಣೆ ಅಂಗವಾಗಿ ಮೈಸೂರು ತಾಲೂಕು ಕಣಿಯನಹುಂಡಿಯಲ್ಲಿ ಆಯೋಜಿಸಿದ್ದ. ಆರೋಗ್ಯ ಉಚಿತ ತಪಾಸಣೆ ಶಿಬಿರವನ್ನು ಜಿಲ್ಲಾ ಪಂಚಾಯಿತಿ ಸಿಇಒ ಕೆ.ಜ್ಯೋತಿ ಉದ್ಘಾಟಿಸಿದರು.

ಶಿಬಿರದಲ್ಲಿ ವಿಶೇಷ ವಾಗಿ ಹೃದಯ, ಮೂಳೆ ರೋಗದ ತಪಾಸಣೆ ಮಾಡಲಾಯಿತಲ್ಲದೆ, ಅಗತ್ಯವಿರುವವರಿಗೆ ಉಚಿತವಾಗಿ ಔಷಧ ವಿತರಣೆ ಮಾಡಲಾಯಿತು. ನಾರಾಯಣ ಹೃದಯಾಲಯ, ಜೆಎಸ್ಎಸ್ ಆಯುರ್ವೇದ ಕಾಲೇಜಿನ ತಜ್ಞವೈದ್ಯರು ಶಿಬಿರದಲ್ಲಿ ಭಾಗವಹಿಸಿದ್ದರು.